ಕೊರವಂಜಿ

ಸಂಪುಟ ೧೧ | ಸೆಪ್ಟೆಂಬರ್ ೧೯೫೨ | ಸಂಚಿಕೆ ೬

ಕುಹಕಿಡಿಗಳು

ಸತ್ಯ—ಅಹಿಂಸೆ ಮಾರ್ಗದಲ್ಲಿ ಜೀವನನಡೆಸಬೇಕು. (ಬೋಧನೆ)

—ಇದನ್ನು ನಮ್ಮ ಆಫೀಸರಿಗೆ ಹೇಳಿ ಅಂತ. (ಮರಿ ಬೋಧನೆ)

* * *

ಸರ್ಕಾರದಲ್ಲಿ ಇಲಾಖೆಗಳು ವಿಪರೀತ ಹೆಚ್ಚೆಂದು ರಾಜಾಜಿ. (ಪತ್ರಿಕೆಯ ಶಿರೋನಾಮೆ)

—ಅರೆ! ಮಂತ್ರಿಗೊಂದು ಇಲಾಖೆ ಅಂತಲೂ ಬೇಡವೆ?—೩೫ ಅಲ್ಲವೇ ಮಂತ್ರಿಗಳು.

* * *

ಫರೂಕ್ ದೊರೆಗಳ ಅರಮನೆಯ ತೆರೆಯ ಹಿಂದೆ ವಿಚಿತ್ರ ವಸ್ತುಗಳಿದ್ದುವಂತೆ.

—ಆದರೆ ಅವು ಎಲ್ಲಾ ನಿರ್ಜೀವವಾದುವಂತೆ.

* * *

ನೇಪಾಳದಲ್ಲಿ ದೊರೆ ತ್ರಿಭುವನರೇ ಆಡಳಿತ ವಹಿಸಿಕೊಂಡರಂತೆ.

—ಗಂಡ ಹೆಂಡಿರ ಜಗಳದ-ಕತೇಲಿ-ಕಳ್ಳ ಉಂಡು ಹೋದಹಾಗೆ.

* * *

ಕಾಶ್ಮೀರದ ರಾಜರು ಈಗ ಆಳುತ್ತಿದ್ದಾರಂತೆ.

—ಬರೋಡಾದವರಹಾಗೆ ನಾಲ್ಕು ಕುದುರೆ ಕಟ್ಟಿಕೊಂಡಿದ್ದರೆ ಚೆನ್ನಾಗಿತ್ತಿರು ತ್ತಿತ್ತಲ್ಲಾ ಅಂತ—

*   *   *

ಹೊಸಕೋಟೆಯಲ್ಲಿ ಗೋಧಿ ಅಭಾವ. (ಪತ್ರಿಕೆ)

—ಅದು ಹಾಗಿರಲಿ ನಮ್ಮ ಅಚ್ಚುಕೂಟದಲ್ಲಿ ಅಕ್ಷರಗಳೇ ಅಭಾವ.

*   *   *

ಈ ಸಾವಿನ ತೆರಿಗೆ ಬಂದಮೇಲೆ ನಮ್ಮ ಉದ್ಯಮ ಯಶಸ್ವಿಯಾಗಬಹುದು ಎಂದು ಕಾಯಕಲ್ಪದವರು ಆಶೆಪಡುತ್ತಿದ್ದಾರಂತೆ.

*   *   *

ಪ್ರಿವೆಂಟಿವ್ ಡಿಟೆನ್ಷ್ನನ್ ಕಾನೂನು ಜಾರಿಗೆ ಬಂತಂತೆ—

—ಇನ್ನು ಮಾಸಲ ಬಟ್ಟೆಯೋರಿಗೆ ಕಷ್ಟ ಬಂತು—

*   *   *

ಮಳೆ ಬರೋಹಾಗಿದೆ—ಮೇಣದ ಬತ್ತಿ ಹಚ್ಚಿರೋ ಎಂದು ವಿದ್ಯುಚ್ಛಕ್ತಿ ಆಫೀಸಿನಲ್ಲಿ ಮುಂಜಾಗ್ರತೆ ಕೊಟ್ಟರಂತೆ.

*   *   *

ಭಾರತದ ಕ್ರಿಕೆಟ್ ಪ್ರವಾಸಿಗ ಟೀಮಿನವರು ಅತ್ಯದ್ಭುತ ಯಶಸ್ವೀ ಅನುಭವ ಪಡೆದರು. (ಗುಪ್ತಾ)

—ಇಂಟರ್‌ನಲ್ಲಿ ನಪಾಸಾದ ನಮ್ಮ ಹುಡುಗನ ಹಾಗೆ.

*   *   *

ಉತ್ಪನ್ನ ಇಲಾಖಾಧಿಕಾರಿಗಳು ಚಿಗುಳಿ ತಿನ್ನುತ್ತಿದ್ದರಂತೆ.

*   *   *

ಹೆಂಡಿರು ತಮ್ಮ ಗಂಡಂದಿರಿಂದ ಕಸಿಯುವ ಆಭರಣಗಳಂತೆ—ತೆರಿಗೆಗಳು— ಶ್ರೀಪ್ರಕಾಶ.

—ಆಹಾ! ಆದರೆ ಜನರೂ ಸರ್ಕಾರವೂ ಅದಕ್ಕೇ ಉಂಡು ಮಲಗೋದೇ ಇಲ್ಲ.

— o —

ಉರಿಗಾಳು

ತಾನೊಬ್ಬ ಪೋಲೀಸಿನವನು ಎಂದು ನಟಿಸಿ ಓಡಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ಮೊನ್ನೆ ಬಸ್ ಕಂಡಕ್ಟರೊಬ್ಬ ಪತ್ತೆಹಚ್ಚಿ, ಸ್ಟೇಷನಿಗೆ ಸೇರಿಸಿದ (ಸುದ್ದಿ)....ಅಪ್ಪಿ ತಪ್ಪಿ ಟಿಕಿಟ್‌ಗೆ ಕಾಸು ಕೊಟ್ಟಿರಬೇಕು, ಪೆದ್ದ.

* * *

ಒಂದು ದಿನವೂ ರಜ ತೆಗೆದುಕೊಳ್ಳದೆ, ೨೫ ವರ್ಷಗಳಕಾಲ ಅವಿಚ್ಛಿನ್ನವಾಗಿ ಪಾಠ ಹೇಳಿದ ಮಾಸ್ತರೊಬ್ಬರಿಗೆ ಹೈದರಾಬಾದಿನಲ್ಲಿ ಬಹುಮಾನ ಕೊಡಲಾಯಿತು ....ಪಾಪ! ಆತನ ವಿದ್ಯಾರ್ಥಿಗಳಿಗೂ ಏನಾದರೂ ರಿಯಾಯತಿ ಬೇಡವೆ?

* * *

ಗಂಡಸರು ಕುಣಿತದಲ್ಲಿ ಭಾಗವಹಿಸಬಹುದೆ? ಎಂದು ಒಂದು ಸಿನಿಮಾ ಪತ್ರಿಕೆ ಕೇಳಿದೆ. ತಾಳ ಹಾಕುವವರು ಯಾರು ಎಂದು ತಿಳಿದಮೇಲೆ ಇದಕ್ಕೆ ಉತ್ತರ.

* * *

ಹಿಂದಿ ಹೆಸರುಗಳನ್ನಳಿಸುವ ಚಳುವಳಿ ಕೇವಲ ಹಲವರ ಪಿತೂರಿ ಮಾತ್ರ (ಭಾಷಣ) ಹೆಸರುಗಳನ್ನು ಗಳಿಸುವ ಪ್ರಯತ್ನ, ಇದು.

* * *

ರವೀಂದ್ರ ಕವಿ ಕಾಲವಾದ ದಿನ ಜನ್ನಿಸಿದ ಈತನೂ ಕವಿ (ಮುನ್ನುಡಿ) ಹಾಗಾದರೆ, ಒಂದೇ ದಿನದಲ್ಲಿ ಎರಡು ಅನಾಹುತಗಳಾದುವು, ಎನ್ನಿ.

* * *

"ಕುಜಗ್ರಹದಲ್ಲಿ ಮನುಷ್ಯನಂಥ ಜೀವಿಗಳಿರಬಹುದು; ಆದರೆ, ಅವರು ಅಲ್ಲಿ ಬದುಕುವುದು ತುಂಬಾ ಕಷ್ಟ" ಎಂದು ಒಬ್ಬರು ವೈಜ್ಞಾನಿಕರು ಬರೆದಿದ್ದಾರೆ........ ಅಂದರೆ, ಕುಜಗ್ರಹವೂ ಕೂಡ ಈ ಭೂಮಿಯ ಹಾಗೆಯೇ, ಅಂದಹಾಗಾಯಿತು.

* * *

ಪಶ್ಚಿಮ ಜರ್ಮನಿಯಲ್ಲಿ ೬ ಲಕ್ಷ ಯುವಕರು ನಿರುದ್ಯೋಗಿಗಳಾಗಿ ನರಳುತ್ತಿದ್ದಾರೆ........ಸಾಕಷ್ಟು ಸಿನಿಮ ಮಂದಿರಗಳಿಲ್ಲವೋ, ಏನೋ,

* * *

ಆನ್ ಚಿತ್ರ ಭಾರತದ ಮೊತ್ತ ಮೊದಲನೆಯ ಬಣ್ಣದ ಚಿತ್ರ....ಇದುವರೆಗೂ ಚಿತ್ರ ಮಾತ್ರ ಬಯಲಿಗೆ ಬರುತ್ತಿತ್ತು; ಇನ್ನು ಮುಂದೆ ಬಣ್ಣವೂ ಬಯಲಾಗುತ್ತದೆ.

* * *

ಭಾಷೆಯನ್ನು ಕಾಮಧೇನುವಿಗೆ ಹೋಲಿಸಬಹುದು (ರಾಜಾಜಿ) ಕನ್ನಡ ಭಾಷೆಯಲ್ಲಿ, ಕಾಮದ್ದೇನು? ನಾವು ಬರೆಯಬಲ್ಲೆವು, ಎಂದು ಪ್ರಗತಿಶೀಲರು ವಾದಿ ಸುತ್ತಿರುವುದು ಇದರಿಂದಲೇ ಇರಬೇಕು.

*　　*　　*

ದಿಲ್ಲಿ, ಕರಾಚಿ ಎರಡು ರಾಜಧಾನಿಗಳನ್ನೊಳಕೊಂಡ ಭಾರತ-ಪಾಕಿಸ್ಥಾನ ರಾಷ್ಟ್ರಗಳೆರಡೂ ಇರುವ ಇಂಡ್ಯಾ ಉಪಖಂಡಕ್ಕೆ "ದಿಲ್‌ಕರ್" ಎಂಬ ಹೆಸರಿಡ ಬೇಕೆಂದು ಒಬ್ಬರು ಸೂಚಿಸಿದಾರೆ. ಆದರೂ, ದಿಲ್ ಮಾಡುತ್ತಾರೋ ಎಂಬುದು ಅನುಮಾನಾಸ್ಪದ.

*　　*　　*　　*

ಸಂಗೀತದಲ್ಲಿ ಜನಸಾಮಾನ್ಯರಿಗೆ ಹೆಚ್ಚು ಅಭಿರುಚಿ ಮಾಡುವಂತೆ ಮಾಡಲು ಅಮೇರಿಕಾದಲ್ಲಿ ಒಂದು ಸಂಘವನ್ನು ಸ್ಥಾಪಿಸಿದ್ದಾರಂತೆ....ಬಹುಶಃ ಆ ಸಂಘದ ಸದಸ್ಯರೊಬ್ಬರೂ ಹಾಡಕೂಡದು ಎಂಬ ನಿರ್ಬಂಧವನ್ನು ಹಾಕುತ್ತಾರೋ ಏನೋ?

*　　*　　*

ಲಾಹೋರ್ ನಗರದಲ್ಲಿ ೨೫ ವೀಳ್ಯದೆಲೆಗೆ ಎರಡೂವರೆ ರೂಪಾಯಿ ಬೆಲೆ (ಸುದ್ದಿ)....ಭಾರತಕ್ಕೆ ಹೊರಟುಬರುವ ಹಿಂದುಗಳಿಗೆಲ್ಲ ಅವರು ವೀಳ್ಯ ಕೊಡುವುದ ರಿಂದ ಬೆಲೆ ಏರಿರಬಹುದು.

*　　*　　*

ಅವತಾರಗಳಾಗಿರುವುದೆಲ್ಲ ಉತ್ತರ ಹಿಂದುಸ್ಥಾನದಲ್ಲಿ, ಆಚಾರ್ಯರು ಜನ್ಮವೆತ್ತಿ ರುವುದೆಲ್ಲ ಹಿಂದುಸ್ಥಾನದಲ್ಲಿ.' (ರಾಜೇಂದ್ರ ಪ್ರಸಾದರು) ಏಕೆ? ನಮ್ಮಲ್ಲಿ ಅನೇ ಕರು ಹತ್ತಾರು ಅವತಾರಗಳೆತ್ತಿದ್ದಾರಲ್ಲಾ.

*　　*　　*

ಮಾತೃಭಾಷೆಯನ್ನೇ ವಿಶ್ವವಿದ್ಯಾಲಯದ ಶಿಕ್ಷಣ ಮಾಧ್ಯಮವಾಗಿ ವ್ಯವಸ್ಥಿತ ಗೊಳಿಸಬೇಕೆಂಬ ಹುಕುಂ ಶೀಘ್ರದಲ್ಲೇ ಸರ್ಕಾರದಿಂದ ಪ್ರಕಟವಾಗಲಿದೆಯಂತೆ.... ಇದನ್ನಾದರೂ ತಾಯ್ನುಡಿಯಲ್ಲಿ ಹೇಳಬಾರದೆ?

*　　*　　*

"ಹುಲ್ಲು ಕೊಟ್ಟವರ ಮನೆಗೆ ಹೂವ ತರುವ" ಎಂಬುದು ಬರಗಾಲ ಪ್ರದೇಶದ ದನಗಳಿಗೆ ಮೇವು ದಾನ ಮಾಡುವ ಸಮಾರಂಭಗಳಲ್ಲಿ ನಿಜವಾಯಿತು, ಎಂದು ಒಬ್ಬರು ತಿಳಿಸುತ್ತಾರೆ....ಮೇವು ದಾನೋತ್ಸವ ಸಮಾರಂಭಕ್ಕೆ ಹೂಮಾಲೆ ಅತ್ಯಗತ್ಯ.

—★—

ಕೊರವಾವಲೋಕನ

ಗಣೇಶನ ಮಂಗಳಾರತಿ ಮುಗಿಸಿಕೊಂಡು ಕ್ಲಬ್ಬಿಗೆ ಹೋದಾಗ ಸುಮಾರು ಏಳು ಗಂಟೆ ಆಗಿದ್ದಿರಬಹುದು. ವರಾಂಡಾದಲ್ಲೇ ಮಧ್ಯದಲ್ಲಿದ್ದ ಕುರ್ಚಿಯಮೇಲೆ ದೊಡ್ಡ ಗಣೇಶನನ್ನ ಕೂರಿಸಿದ್ದಂತೆ ಕಂಡಿತು. ಯಾವ ವರ್ಷವೂ ಕ್ಲಬ್ಬಿನಲ್ಲಿ ಗಣೇಶನ್ನ ಕೂರಿಸಿದ್ದಿಲ್ಲ. ಇದು ಜಾತ್ಯಾತೀತವಾದ ಕ್ಲಬ್ಬು. ಭಾರತದಂತೆ—ಇಲ್ಲೇನು ಬಂತು ಎಂದು ಕಣ್ಣು ಉಜ್ಜಿಕೊಂಡು ಒಳಕ್ಕೆಹೋದೆ. ಹತ್ತಿರ ಹೋಗ್ತಾ ಹೋಗ್ತಾ ತಿಳಿಯಿತು. ಕೊರವ ಕುರ್ಚಿ ಮೇಲೆ ಚಕ್ಕಳ ಮುಟ್ಟಿಗೆ ಹಾಕಿಕೊಂಡು ಕೂತಿದ್ದ. ಮಿಕ್ಕ ಮೈಕಟ್ಟೆಲ್ಲಾ ಐರಾವತವನ್ನು ಜ್ಞಾಪಿಸಿದ್ದು ಸಹಜವೇ ಆಗಿತ್ತು—ಹೊದ್ದಿದ್ದ ದಲ್ಲಿ ಸೊಂಡಲಿನಂತೆ ದೂರಕ್ಕೆ ಕಂಡಿತ್ತು.

“ ಏನಯ್ಯಾ ! ಕೊರವ ! ಕಡುಬು ಹೊಟ್ಟೆಮೇಲೆ ಕೂಡ ಕಾಣುತ್ತಾ ಇದೆ ಯಲ್ಲ! ಭರ್ಜರಿ ಹಬ್ಬ ಅಂತ ಕಾಣುತ್ತೆ ” ಅಂದೆ.

ಕೊರವ ಒಂದು ನಿಮಿಷ ಕಣ್ಣುರೆಪ್ಪೆ ಮಿಟುಕಿಸದೆ ನನ್ನನ್ನೇ ನೋಡಿದ. ಮೀನನ್ನು ನುಂಗುವುದಕ್ಕೆ ಮುಂಚೆ ಮೀನನ್ನು ನೋಡಿ ಕಣ್ಣೀರಿಡೋ ಮೊಸಳೆ ತರಹ ಅವನ ಮುಖ ಛಾಯೆ ಬದಲಾಯಿಸಿ ರಂಗು ಇಂಗಿತು.

“ ನೀನು ವೈದ್ಯನಾದದ್ದಕ್ಕೆ ಸಾರ್ಥಕವಾಯಿತು, ಈಗ, ಹೊಟ್ಟೆ ಹೀಗೆ ಉಬ್ಬಿ ಬ್ಬಾಗಿ ಕಾಣಿಸೋದು ಕಡುಬಿನಿಂದ ಸಾಧ್ಯವೇನೋ ? ಬರೀ ವಾಯು ತುಂಬಿ ಕೊಂಡಿದೆ. ಅದೊಂದಕ್ಕೆ ನಮ್ಮ ಘನ ಸರ್ಕಾರ ಇನ್ನೂ ತೆರಿಗೆ ಹಾಕಿಲ್ಲ. ಅದಕ್ಕಾಗಿ ಅದರಿಂದ ಹೊಟ್ಟೆ ತುಂಬಿಸಿಕೊಂಡಿದೀನಿ? ವರ್ಷಾವಧಿ ಹಬ್ಬ ಅಂತ ಗಜಾನನ ಪೂಜೆಮಾಡಿ ಇವತ್ತು ಸ್ವಲ್ಪ ಹೆಚ್ಚು ವಾಯು ಸೇವನೆ ಮಾಡಿದ್ದೀನಿ.

ಅಷ್ಟೂ ತಿಳಿಯುಲ್ಲವೇ ನಿನಗೆ ? ” ಅಂದ

ಎಲಾ! ಮಗನೇ ಎಲ್ಲಿಂದೆಲ್ಲಿಗೆ ಇವನ ಮಾತುಸರಣಿ; ಹೋಗಲಿಬಿಡಲಿ. ಹಬ್ಬದ ದಿನ ಇವನ ಹತ್ತಿರ ರಾಜಕೀಯ ಇಷ್ಟು ಹೊತ್ತಿನಲ್ಲಿ ಏಕೆ ಎಂದು ಸುಮ್ಮಗಾದೆ.

* * *

ಬಿಸಿಲು ಮಳೆ ಬಂದ ಸಾಯಂಕಾಲ. ನಾಯಿನರಿ ಕಾಡುಗಳಲ್ಲಿ ಓಡೋ ಹೊತ್ತು. ರಾಜಕೀಯ ಪ್ರತಿ ಪಕ್ಷಗಳು ಒಕ್ಕೂಟಕ್ಕೆ ಸೇರುವ ವೇಳೆ. ಹವಾ ತಂಡಾಗಿದ್ದರೂ, ವೈ ಕಾವು ಬರೋ ವಾತಾವರಣ. ಸುಬ್ಬುಲಕ್ಷ್ಮಿ ಹಾಡಿದರೆ ನನಗೆ ಎಷ್ಟು ಹಿತವಾಗುತ್ತಿತ್ತೋ ಅದಕ್ಕಿಂತ ಹಿತವಾಗುತಿತ್ತು ನಾನು ಪಲುಕಿದ ಹಾಡನ್ನು ನಾನು ಕೇಳಿದಾಗ—ಕ್ಲಬ್ಬಿಗೆ ನಡೆಯುತ್ತಾ.

ಕ್ಲಬ್ಬಿನೊಳಕ್ಕೆ ಹೋದಾಗ ಕೊರವಕೂತಿದ್ದ. ಒಳಕೊಠಡಿಯಲ್ಲಿ ಸುತ್ತಲೂ ನಾಲ್ಕೈದು ಯುವಕರು ಕೂತಿದ್ದರು. ಅವರಿಗೆಲ್ಲಾ "ಟೀ" ಕೊಡಿಸಿದ್ದ. ಎಲ್ಲರೂ ಚಹಾ ಚಪ್ಪರಿಸುತ್ತಿದ್ದರು, ಇದೆಲ್ಲಾ ವರಾಂಡಾದಲ್ಲಿದ್ದ ನನಗೆ ದೊಡ್ಡ ಕಿಟಕಿ ಮೂಲಕ ಕಾಣಿಸುತ್ತಿತ್ತು.

"ಖ–ಖ–ಖಂಡಿತ ನಿಮ್ಮ ಸ ಸ ಸಂಘದ ಅಧ್ಯಕ್ಷ ಭಾ ಭಾ ಭಾಷಣ ಮಾಡುತ್ತೀನೆ. ತು ತು ತು ತುಂಬಾ ದಿ ದಿ ದಿ ದಿವಸದಿಂದ ನ ನ ನ ನ ನನ್ನ ಅನುಭವಾನಾ ಯು ಯು ಯು ಯುವಕರಿಗೆ ಬೊ ಬೋ ಬೋ ಭೋಧಿಸಬೇಕು ಅಂತಿದ್ದೆ. ಈ ಈಗ ನೀವು ಒಂದು ಸ ಸ ದವಕಾಶ ಕೊಟ್ಟಿದ್ದಕ್ಕೆ ನಿಮಗೆ ವ ವ ವಂದ್ನೆ."

ಕತ್ತೆತ್ತಿ ನೋಡಿದೆ. ಕೊರವ ಹೀಗೆ ಮಾತಾಡ್ತಾ ಇದ್ದ. ಆ ಹುಡುಗರ ಜತೇಲಿ. ಇದೇನು ಬಂತು ಇವನಿಗೆ ಇನ್ನೂ ಸೂರ್ಯ ಮುಳಿಗೇ ಇಲ್ಲ ಆಗಲೇ ಹೀಗೆ ಇಷ್ಟು ತೊ ತೊ ತೊದಲ್ತಾ ಇದಾನೆ. ಇದರ ಮರ್ಮ ಏನಿರಬಹುದು? ಎಂದು ಕುತೂಹಲದಿಂದ ಕಿಟಕಿಗೆ ಕಿವಿ ಕೊಟ್ಟೆ!

ಯುವಕ ಮುಖಂಡ ಹೇಳುತ್ತಿದ್ದ. ನಿಮ್ಮನ್ನು ಬಂದು ಮುಂದಿನವಾರ ನೋಡ್ತೀವೆ ಸಾರ್, ನಮ್ಮ ಅಧ್ಯಕ್ಷರಿಗೆ ನೀವು ಒಪ್ಪಿದ್ದೀರಿ ಅಂತ ಹೇಳ್ತೀವೆ, ಆಮೇಲೆ ಮಿಕ್ಕ ಕಾರ್ಯಕ್ರಮ ಏರ್ಪಡಿಸುತ್ತೀವೆ" ಒಂದೆರಡು ನಿಮಿಷದಲ್ಲಿ ಯುವಕರೆಲ್ಲಾ ಹೊರಕ್ಕೆ ಬಂದು, ಗುಡು ಗುಡು ಅಂತ ನಡೆದುಹೋದರು. ಹೋದ ದಿಕ್ಕಿನಿಂದ ಕಿಲಕಿಲ ಎಂಬ ಮಾರ್ದನಿ ಬರುತ್ತಿತ್ತು.

ಒಳಕ್ಕೆ ಹೋಗಿ ಕೇಳಿದೆ. "ಏನು ಬಂತೋ ನಿನಗೆ ಕೊರವ ಯುವಜನರು, ಮುಂದಿನ ಜನಾಂಗದ ಪೀಳಿಗೆಯವರು ಹೀಗೆ ಬಂದರೆ, ನೀನು ಈ ಹೊತ್ತಿನಲ್ಲೇ ಹೀಗೆ ತೊದಲಿದರೆ ನಿನಗೆ ಅವಮಾನ ಅಲ್ಲವೇನೋ? ಕ್ಲಬ್ಬಿಗೆ ಕೆಟ್ಟ ಹೆಸರಲ್ಲವೇನೋ? ಎಂದೆ.

ಕಾಗೆ ಕತ್ತನ್ನೇ ತಿರುಗಿಸಿ ನೋಡುತ್ತೆ ನೋಡಿ! ಹಾಗೆ ಅವ ಕತ್ತನ್ನೇ ಕಿಟಕಿ ಯಾಚೆ ತಿರುಗಿಸಿ, ಅಲ್ಲಿ ಯಾರೂ ಇಲ್ಲದ್ದನ್ನು ಕಂಡು ಧೈರ್ಯವಾಗಿ ಹೇಳಿದ.

" ಆ ಹುಡುಗರು ಒಂದು ಕಾಗದ ಬರೆದಿದ್ದರು. ಯಾವುದೋ ಸಂಘದವರಂತೆ ಅವರ ಪ್ರಥಮ ಭಾಷಣ ನಾನು ಮಾಡಬೇಕಂತೆ. ನಿಮ್ಮ ಹೆಸರು ಪ್ರಸಿದ್ಧ ಸಾರ್ ಅಂದರು. ಹೇಗಪ್ಪಾ ಈ ಪೀಡೆ ಪರಿಹಾರ ಮಾಡಿಕೊಳ್ಳೋದು ಅಂತಿದ್ದೆ. ಆಗ ಈ ಯೋಚನೆ ಹೊಳೀತು. ಇಲ್ಲಿಗೆ ಅವರನ್ನು ಬರಹೇಳಿದೆ. ತಂಪಗೆ ಚಹಾ ಕುಡಿಸಿ ಎರಡು ನಿಮಿಷ ತೊದಲುತ್ತಾ ಭಾಷಣಕ್ಕೆ ಒಪ್ಪಿಕೊಂಡೆ. ಅವರುಗಳ ಮುಖ ನೋಡಬೇಕಿತ್ತು. ಬಂದ ನಗುವನ್ನ ಹುದುಗಿಸಲು ಮಿಾಸೆಕೂಡ ಇಲ್ಲ ಹುಡುಗರಿಗೆ. ಒಬ್ಬ ಕೆಂಪಾದ, ಒಬ್ಬ ಕಪ್ಪಾದ, ಒಬ್ಬ ಕೈವಸ್ತ್ರ ಮುಖಕ್ಕೆ ಮುಚ್ಚಿಕೊಂಡು ಸೀನಿದ, ಇನ್ನೊಬ್ಬ ತಡೆಯಲಾರದೆ ನಕ್ಕೇಬಿಟ್ಟ.—ಅ ಅ ಅಂದ ಹಾಗೆ ಸಾ ಸಾ ಸಾರ್ ನಾ ನಾ ನಾನೇ ಕಾರ್ಯದರ್ಶಿ—ತು ತು ತುಂಬಾ ಥ್ಯಾಂಕ್ಸ್ ಅಂದು ಸಮಜಾಯಿಷಿ ಹೇಳಿದ.

ಇನ್ನು ಮೇಲೆ ನನ್ನ ಕಡೆ ಸುಳಿಯೊದೇ ಇಲ್ಲ ಅವರು. ಅಂತ ಕೊರವ ಇಲ್ಲದ ಮಿಾಸೆಮೇಲೆ ಕೈ ಬೆರಳಾಡಿಸಿದ.

—ವಹವ್ವಾ—ಎಂದುಕೊಂಡೆ.

* * • *

ಟೀಪಾರ್ಟಿ ಮುಗಿಸಿಕೊಂಡು ಕ್ಲಬ್ಬಿಗೆ ಹೋದಾಗ ಮೊದಲುಸಿಕ್ಕಿದವ ಕೊರವ. ಹಸೆಮೇಲಿನ ಗಂಡು ಹೆಣ್ಣನ್ನು ನೋಡುವ ರೀತಿ ನನ್ನನ್ನೂ ಕಂಡೂ ಕಾಣದವನಂತೆ ನೋಡಿದ. "ಯಾಕೋ ಹಾಗೆ ವಾರೆಗಣ್ಣಿಂದ ಇಣಿಕಿ ಇಣಿಕಿನೋಡ್ತಿ" ಎಂದು ಕೇಳಿದೆ? ತುಟಿ ಮುಟ್ಟಿ, ಮೂಗು ತೋರಿಸಿ ಏಕೋ ಇದೆಲ್ಲಾ ಎಂದು ಕೈಯಾಡಿಸಿ ಸಂಜ್ಞೆಮಾಡಿ ಕೇಳಿದ.

ಅಯ್ಯೋ! ಅಷ್ಟೇನೆ! ಧರ್ಮಸಾಗರು ಇವತ್ತು ದೆಹಲಿಗೆ ಹೋಗೋರಿಗೆ ಟೀ ಪಾರ್ಟಿ ಇಟ್ಟಿದ್ದರು. ತುಟಿರಂಗು ಅಲ್ಲಿನ ಬೀಡಾದ್ದು, ಮೂಗಿಗೆ ಹೊಡೆಯುತ್ತಿರುವುದು ಅಲ್ಲಿನ ಸುಗಂಧ, ಅಂಗಿಮೇಲಿರುವುದು ಅಲ್ಲಿಕೊಟ್ಟ ನೆಹ್ರೂ ಗುಂಡಿಪುಷ್ಪ ಅಂದೆ.

ಸುಮ್ಮನೆ ಗಹಗಹಿಸಿ ನಗಲು ಆರಂಭಿಸಿದ ಕೊರವ. ಪಡ್ಡೆ ಹುಡುಗೀನ ಗಂಡನ ಹೆಸರು ಕೇಳಿದರೆ ಹೇಗೆ ಬಳುಕಿ ಬಳುಕಿ ನಗುತ್ತಾಳೆ ಹಾಗೆ ಕುಲುಕಿ ಕುಲುಕಿ ನಗಲು ಆರಂಭಿಸಿದ.

ನನ್ನ ತಲೆಕೆರಕೊಂಡು ಕೇಳಿದೆ—ಯಾಕಯ್ಯಾ ರಾಯ! ಅಂತ.

ಧರ್ಮಸಾಗರು ಪಾರ್ಟಿ ಅನ್ನುತ್ತಲೂ ನಗುಬಂತು. ಇವತ್ತು ನಾನೊಬ್ಬ ಧರ್ಮಸಾಗರೂನ ಬೆಳಗ್ಗೆ ನೋಡಿದೆ. ಅದಕ್ಕೆ ನಗುಬಂತು. ಅಂತಂದು ನನ್ನ ಕುತೂಹಲ ಕೆರಳಲಿ ಅಂತ ನಿಧಾನವಾಗಿ ಒಂದು ಸಿಗರೇಟ್ ಹಚ್ಚಿದ. ನನ್ನ ಆತುರ ನೋಡಿ ಸಮಾಧಾನಗೊಂಡು ಮುಂದುವರಿಸಿದ.

ಬೆಳಿಗ್ಗೆ ಧರ್ಮನಿಧಿ ವೈದ್ಯ ಸಮ್ರಾಟರ ದವಾಖಾನೆ ಕಡೆ ಹೋಗಿದ್ದೆ. ಅಲ್ಲಿನ ಜನ ಸಂದಣಿ ನೋಡಿ ಸುಸ್ತಾದೆ. ಅಕ್ಕಿಕಾಳು ಎರಚಿದರೆ ನೆಲಕ್ಕೆ ಬೀಳುಲ್ಲ. ಕಾರಣ ತಿಳಿದೇ ಇದೆಯಲ್ಲಾ! ಎಲ್ಲಾ ಪುಕಟ್ಟೆ ವೈದ್ಯಕೀಯ ಸಲಹೆ ಖಂಡಿತವಾಗಿಯೂ ಧರ್ಮ ನಿಧಿಯೇ ಅನ್ನಿಸಿತು. ಆದರೆ ದವಾಖಾನೆ ಬಾಗಿಲಿಂದ ಗೇಟಿನ್ತ ತನಕ ನಾಲ್ಕು ಭಿಕ್ಷುಕರು "ಧರ್ಮ ಕೊಡಿ" ಅಂತ ಕೇಳ್ತಾ ನಿಂತಿದ್ದರು. ಎಲ್ಲರ ಮುಖವೂ ವೈದ್ಯ ಸಮ್ರಾಟರ ಮುಖದ ಚಹರೆಯಂತೇ ಇತ್ತು. ಆದರೆ ಒಬ್ಬ ಕುಂಟ ಒಬ್ಬ ಹೆಳವ, ಒಬ್ಬ ಕುರುಡ, ಒಬ್ಬ ಮೂಗ. ಇದರ ಮರ್ಮ ಏನಿರಬಹುದು ಅಂತ ಹೊರಗೆ ಕಾಣಿಸುವಷ್ಟು ದೂರದಲ್ಲಿ ಎದುರು ಸಾಲಿನ ಅಂಗಡಿಯಲ್ಲಿ ಕಾದೆ. ಸುಮಾರು ೧ ಗಂಟೆಗೆ ದವಾಖಾನೆ ಬಂದಾಯ್ತು. ವೈದ್ಯ ಸಮ್ರಾಟರು ಹೊರಬಿದ್ದರು. ಈ ನಾಲ್ಕು ಜನರೂ ತಮ್ಮ ತಮ್ಮ ಕೈಲಿದ್ದ ಡಬ್ಬವನ್ನೆಲ್ಲಾ ಧರ್ಮನಿಧಿಗಳ ಕೈಗೆಕೊಟ್ಟರು. ವೈದ್ಯ ಸಮ್ರಾಟರು ತಮ್ಮ ಜೋಳಿಗೆಯಲ್ಲಿ ಅವನ್ನು ತುಂಬಿಕೊಂಡು ನೇರ ಬ್ಯಾಂಕಿನ ಕಡೆ ಹೊರಟರು. ಅವರ ಹಿಂದೆ ನೆರಳಿನಂತೆ ನಾನೂ ನಡೆದೆ ಬ್ಯಾಂಕಿನಲ್ಲಿ ಆಡಬ್ಬಗಳನ್ನ ಖಾಲಿಮಾಡಿ ಅಷ್ಟನ್ನೂ ತಮ್ಮ ಲೆಕ್ಕಕ್ಕೆ ಜಮಾ ಮಾಡಿಸಿ ಹಣೆ ಒರೆಸಿಕೊಂಡು ಅವರು ಹೊರಟುಹೋದರು. ಆ ಜಮಾ ಮಾಡಿದ ನೌಕರ ನಮ್ಮನೆಯಲ್ಲಿ ಒಮ್ಮೆ ಅಡಿಗೆಯವನಾಗಿದ್ದ. ಅವನ ತಮ್ಮ ಬ್ಯಾಂಕ್ ಡೈರೆಕ್ಟರ ಅಳಿಯನಾದ ಮೇಲೆ ಅವನಿಗೆ ಈ ಕೆಲಸ ಸಿಕ್ಕಿತು. ನನ್ನನ್ನ ಕಂಡರೆ ತುಂಬಾ ಮರ್ಯಾದೆ ಅವನಿಗೆ ವಿಚಾರಿಸಿದೆ. ವೈದ್ಯ ಸಮ್ರಾಟರು ಎಷ್ಟು ಜಮಾಮಾಡಿದ್ದು ಅಂತ.

—ಮುನ್ನೂರೈವತ್ತು :—

ಅಲ್ಲವೋ ಬಕ್ರಾ. ಮುನ್ನೂರೈವತ್ತರಲ್ಲಿ ಐವತ್ತರನ್ನ ಡಬ್ಬ ಹಿಡಿದು ಧರ್ಮ ಎತ್ತಿದ ಆ ನಾಲ್ಕು ತಮ್ಮಂದಿರಗೆ ಹಂಚಿದರೂ ದಿನಕ್ಕೆ ೩ ತಿಂಗಳಿಗೆ ಸುಮಾರು ೯೦೦೦ ಗಿಟ್ಟಿತಲ್ಲೋ! ಇದಕ್ಕೆ ವರಮಾನ ತೆರಿಗೆ ಕೂಡಇಲ್ಲ. ಏಕೆ ಅಂದರೆ ಧರ್ಮಾರ್ಥ ವೈದ್ಯನಿಲಯ! ಅಂದ ಮೇಲೆ ಸಿನಿಮಾ ತಾರೆಗಳು ಕೂಡ ಅವನನ್ನು ಕಂಡು ಕರುಬ ಬಹುದಲ್ಲವೇನೋ?

ಇದೇ ಧರ್ಮಸಾಗರರ ಹಿನ್ನಲೆ ಅಲ್ಲವೇ? ಅವರ ಟೀಪಾರ್ಟಿ ಅಂದರೆ ಅದಕ್ಕೇ ನಗು ಬಂದಿದ್ದು. ಅಂದು ಮುಗಿಸಿದ.

—ಹೌದಾ! ಅಂತ ನನ್ನ ಮೂಗಿನ ತುದಿ ಪ್ರಶ್ನಾರ್ಥ ಚಿಹ್ನೆಯನ್ನೂ ಸೂಚಿಸಲು ಹೊರಟಿತು.

—o—

ಮಗನ ಕಾಗದ

ತೀರ್ಥರೂಪು ತಂದೆಯವರಿಗೆ ಬಾಲಕನ ನಮಸ್ಕಾರಗಳು. ಆದಾಗಿ, ಈ ವರೆಗೆ ನಾನು ಸೌಖ್ಯವಾಗಿದೇನೆ, ತಕ್ಕಮಟ್ಟಿಗೆ. ನಾನು ಬೆಂಗಳೂರಿಗೆ ಬರಲೇ ಬಾರದಾಗಿತ್ತು. ನಾನು ತಂದ ೫೦ ರೂಪಾಯಿಗಳು ಖರ್ಚಾಗಿ, ನೀವು ಹೇಳಿದ್ದ ಕಡೆಯಿಂದ ೨೦ ರೂಪಾಯಿ ಸಾಲ ಪಡೆದು ಅದೂ ಕರಗುತ್ತ ಬಂದಿದೆ. ಊರಿಗೆ ಬರುವ ಖರ್ಚನ್ನು ಮಾತ್ರ ಬೇರೆ ಮಡಗಿದೇನೆ. ನಾಳೆಯೋ ನಾಳದ್ದೋ ಹೊರಟು ಬರುತ್ತೇನೆ.

ನಮ್ಮನ್ನು ಪುಸಲಾಯಿಸಿ, ನನಗೆ ನೌಕರಿ ಕೊಡಿಸುತ್ತೇನೆ ಎಂದು ನಂಬಿಸಿ ಇಲ್ಲಿಗೆ ಕರೆತಂದ ಆ ಸಾಮಿಯ ಕೈವಾಡ ಇಲ್ಲಿ ಏನೂ ಸಾಗುವಂತಿಲ್ಲ. ಅವರು ಹೇಳಿದ ಮನೆಗೆ ಅವರನ್ನು ಬಿಡುವುದೇ ಇಲ್ಲ. ನನ್ನ ಹಾಗೆಯೇ ಅವರೂ ಹೊರಗಡೆಯೇ ನಿಂತಿರುತ್ತಾರೆ; ಅಂದಮೇಲೆ, ಅವರಿಂದ ಏನಾದೀತು. ಆ ವಿಷಯ ಅಲ್ಲಿಗೆ ಬಂದ ಮೇಲೆ ಪಬ್ಲಿಕ್ ಮಾಡುತ್ತೇನೆ.

ನೀವು ಬರೆದಿದ್ದ ದೊಡ್ಡ ಮನುಷ್ಯರನ್ನು ಕಂಡಿದ್ದೆ. ಅವರು ಮತ್ತೊಬ್ಬರಿಗೆ ಒಂದು ಚೀಟಿಕೊಟ್ಟು, ನನ್ನ ಕಾಟ ಕಳೆದುಕೊಂಡರು. ಅವರ ಹತ್ತಿರ ಹೋಗಿ ಕೈ ಮುಗಿದು, ಕಾಲು ಕಟ್ಟಿಕೊಂಡೆ. ನಿಮ್ಮ ದೊಡ್ಡ ಮನುಷ್ಯರನ್ನು ಅವರು 'ನಾ ಕಾಣೆ' ಎಂದುಬಿಟ್ಟರು. ಆದರೂ, ನಾನು ಅವರನ್ನು ಬಿಡಲಿಲ್ಲ. ಪಟ್ಟಾಗಿ ಹಿಡಿದೆ. ಸಂಜೆ ಬಾ, ನಾಳೆ ಬಾ, ಎಂದು ಎಂಟು ದಿನ ಅಲೆಸಿದರು. ಖಾಲಿ ನೌಕರಿಗಳೊಂದೊಂದಾಗಿ ಭರ್ತಿಯಾಗುತ್ತ ಬಂತು. ನಾನೇ ಕಣ್ಣಾರಕಂಡೆ. ಕಡೆಗೆ ಗೊತ್ತಾಯಿತು, ಅವರ ಅಳಿಯಂದಿರುಗಳೇ ಅವಕ್ಕೆ ಪೈಪೋಟಿ ಅಂತ.

ಇಲ್ಲಿ ನಮ್ಮಂಥವರಿಗೆ ಚಾನ್ಸೇ ಇಲ್ಲ. ಸತ್ಯವಂತ ಅಂದರೆ, ಹೆಚ್ಚೆಂದರೆ, ಜವಾನನ ಚಾಕರಿ ದೊರೆಯುತ್ತದೆ. ಅದೊಂದಕ್ಕೇನೇ ಇವರು ಸುಳ್ಳು ಕಳ್ಳತನ ಇಲ್ಲ ಎಂಬ ಸರ್ಟಿಫಿಕೆಟ್ ಕೇಳುವುದು.

ಬೆಂಗಳೂರು ದೂರಕ್ಕೆ ಚೆನ್ನ, ಅಷ್ಟೆ. ಸುಮ್ಮನೆ ಮೋಸಹೋಗಿ, ಪ್ರತಿ ರೈಲಿಗೂ ಬಸ್ಸಿಗೂ ಇಲ್ಲಿಗೆ ಜನ ಗುಂಪುಕಟ್ಟಿಕೊಂಡು ಬರುತ್ತಿದಾರೆ, ಅಷ್ಟೆ. ಇಲ್ಲಿ ಶ್ರೀಮಂತ

ರೆಲ್ಲ ಬಡವರಿಗಿಂತ ಕಷ್ಟದಲ್ಲಿದಾರೆ; ಮೂರು ಕಾಸುಕೂಡ ಅವರು ಒಬ್ಬರಿಗೆ ಕೋ ಎಂದು ಕೊಡುವ ಸ್ಥಿತಿಯಲ್ಲಿಲ್ಲ. ಇಲ್ಲಿಯ ಹಾಲಿಗೆ ರುಚಿಯೇ ಇಲ್ಲ; ಕಾಫಿಯೆಲ್ಲ ಬರೀ ಚಿಕರಿ; ದೋನೆಯಲ್ಲ ತೂತು. ನಾಟಕಗಳಲ್ಲಿ ಜನ ಸತ್ತರೆ ನೋಡುವ ಕೂತಿರುವವರು ನಗುತ್ತಾರೆ; ಸಿನಿಮಗಳಲ್ಲಿ ತಮಾಷೆ ತೋರಿಸಿದರೆ, ನೋಡುವವರು ಅಯ್ಯೋ ಎನ್ನುತ್ತಾರೆ. ಎಲ್ಲ ತಲೆಕೆಳಗೆ, ದೊಡ್ಡಮನುಷ್ಯರೆಲ್ಲ ತೀರ ಸಣ್ಣವರು, ಸಣ್ಣವರೇ ವಾಸಿ. ಹೊಗಳು ಭಟ್ಟರೇ ಬಹುಮಂದಿ. ಅಯೋಗ್ಯರೇ ಯೋಗ್ಯರು, ಮೋಸಗಾರರಿಗೆ ಮನ್ನಣೆ.

ನನಗೆ ಬೇಜಾರಾಗಿ ಹೋಗಿದೆ. ನೀವು ಹೇಳುತ್ತಿದ್ದಂತೆ ಅಲ್ಲ. ಈ ಊರು ಬಹುಶಃ ಎಲ್ಲ ಪಟ್ಟಣಗಳೂ ಇದೇ ರೀತಿಯೇ ಇರಬೇಕು. ಕ್ಷೌರದ ಸಲೂನುಗಳು, ವಾಷಿಂಗ್ ಸಲೂನುಗಳು, ಇವೆರಡರ ಆಧಾರದ ಮೇಲೆ ಇಲ್ಲಿಯ ಥಳಕು ಜೀವನ ನಿಂತಿದೆ. ಜನರೆಲ್ಲ ಹುಚ್ಚರಂತೆ, ಅಲ್ಲಿಂದಿಲ್ಲಿಗೆ ಓಡುತ್ತಿರುತ್ತಾರೆ. ಒಬ್ಬನಿಗೆ ಇನ್ನೊಬ್ಬನನ್ನು ನೋಡಿ, ನಾಲ್ಕು ಮಾತು ನಿಧಾನವಾಗಿ ಆಡುವುದಕ್ಕೆ, ಪುರಸತ್ತೇ ಇಲ್ಲ. ಪ್ರತಿ ಒಬ್ಬನಿಗೂ ಪಕ್ಕದವರ ಜೋಬಿನ ಮೇಲೆಯೇ ಕಣ್ಣು.

ನಾನು ನಾಳೆಯೇ ಹೊರಟು ಬರುತ್ತೇನೆ. ಬಂದು ಹಳ್ಳಿಯಲ್ಲೇ ಇದ್ದು, ನಿನ್ನ ಬೇಸಾಯದಲ್ಲಿ ನಿನಗೆ ನೆರವಾಗುತ್ತೇನೆ. ಹಾಲು ಮೊಸರಾದರೂ ಅಲ್ಲಿ ಗ್ಯಾರಂಟಿಯಾಗಿ ಸಿಗುತ್ತದೆ. ಇಲ್ಲಿಯ ಹೋಟಲು ತಿಂಡಿಗಿಂತ, ಅಲ್ಲಿಯ ಅಂಬಲಿಯೇ ವಾಸಿ.

—ಇತಿ, ತಮ್ಮಯ್ಯ



ನಾಗರಾಜನ ಫರ್ಮಾನ್:—ನನಗೆ ನಿನ್ನೆ ಕನಸಾಯಿತು. ೧೦೮ ಗೋವುಗಳನ್ನು ಒಂದು ರಾತ್ರಿಯಲ್ಲಿ ಯಾರು ಕಡಿಯುವರೊ ಅವರಿಗೆ ಮುಂದಿನ ಜನ್ಮದಲ್ಲಿ ಮಂತ್ರಿ ಪದವಿ ದೊರೆಯುತ್ತೆ ಅಂತ.

ಅಯಿತ್ವಾರ ಬಂತು

ಬಂತು ಬಂತ್ ಆಯಿತ್ವಾರ ಬಂತು
ಆಯವಾಗಿರಬ್ಯೆದು ಮನೆಯಾಗ ಕುಂತು

ಕೋಳಿ ಕೂಗಾಕಿಲ್ಲ—ಉರಿನ್ ಆಕಿ ವೊಲೆಗೆ—
ಶಾರೆ ತುಂಬಾ ಯೆಣ್ಣೆ ತಟ್ಟಿ ನನ್ನ ತೆಲೆಗೆ—
ರಪರವಾ ರಾಚಿದರೆ ಬಿಸಿ ಕುದೀನೀರ—
ಬಂದು ಮತ್ತ್ ಮಲಗಿದರೆ—ವಂಬತ್ತು ಪೂರ!

ವಂಬತ್ತು—ಬಿಸಿ ಕಾಪಿ! ಅತ್ತ್ರಕ್ ಉಪ್ಪಿಟ್ಟು!
ಅನ್ನೆಳ್ಡಕ್ ಎಸರು ಜೊತೆ ಬಿಸಿ ಮುದ್ದೆಯಿಟ್ಟು!
ಮತ್ತೆ ಮಕ್ಕಳಕೂಟಿ, ಅವರ್ ಆಟಪಾಟ!
ದಚಿಬಾರ ವುಲಿಕುರಿ ಮಲ್ಲಿ ಸಂಗಾಟ!

ಸಂಜೆಗ್ ಅಣ್ಣಮ್ಮಂಗೆ ತಟ್ಟಿ ತಂಬಿಟ್ಟು!
ಬಿಕ್ಸದೋರ್ಗ್ ಅದನಲ್ಲೆ ಅಂಚಿ ಯೀಟಿಟ್ಟು!
ರಾತ್ರಿ ಮನೆಯಾಗ್ ಇಡದು ಆರುಮನಿ, ಬಜನೆ!
ನಿದ್ದಿ ಅತ್ರ್ಹೂಗಂಟ ಕತೆ ಯೇಳೊ ಮಜನೆ!

ಅಯಿತ! ಸುರಿಯಾ! ನಮಗೆ ನೀ ತಂಪುದೀಪ-
ಕತ್ತಲೇನೇ ಯಿರಲಿ ಮಿಕ್ಕದಿನ ತಾಪ!
ಈವೊಂದೆ ದಿನನೆ-ನಾ ಬಿಟ್ಟಿದ್ದೆ ಬಾಣ!
ನಾಳೆಯಿಂದ್ ಎಂಗೂನೆ ಅದೆ ಅಳೀ ಗಾಣ!

—ನಾಗ.

—★—

ಪಂಡಿತ ಮೆದುಳಾನಂದರ್
"ಕವಿಗಳು ಹುಚ್ಚರು" ಎಂದರ್:
"ನಮಗನುಮಾನವೆ ಬರದಂತೆ
ಬರೆವರು ತಾವ್ ತಂತಮ್ಮಂತೆ!"

ಸುಪುತ್ರನ ಗೋಳು

" ಅಮ್ಮಾ...."

" ಏನೋ ಮಗು....? "

" ಈ ತನಕ ನಂದು ಹುಡುಗು ಬುದ್ಧಿ ಅಮ್ಮಾ...."

" ಯಾಕೋ ಹಾಗಂತಿ ಮಗು?

" ಇನ್ನಾದರೂ ಆಚಾರ ವಿಚಾರ ಅಂತ ಕೊಂಚ ಗಮನ ಕೊಡಬೇಕು ಅಂತಿದೀನಮ್ಮಾ"

" ಒಳ್ಳೇದಪ್ಪಾ"

" ಸದ್ಯಕ್ಕೆ ಶನಿವಾರ ರಾತ್ರಿ ಊಟ ಮಾಡೊಲ್ಲ ನಾನು "

" ಅಯ್ಯೋ ಮರಿ....ನಿನಗೆಲ್ಲಾಗುತ್ತೋ ಅವೆಲ್ಲ ಪಾಪ"

"ಅಷ್ಟೇ ಅಲ್ಲಮ್ಮ....ಕ್ರಮೇಣ ಸಾಧ್ಯವಾದರೆ ಏಕಾದಶಿ ಗೀಕಾದಶಿ ಅಂತ...."

" ಇಲ್ನೋಡಿ ಅತ್ತೆಮ್ಮ...."

" ನಿನ್ನ ಯಾರೇ ಕರೆದರು ? "

" ಬರೆ ಊಟ ಮಾಡ್ತಿರುವಾಗಲೆ ಅಂಗಡಿ ಬಿಲ್ ಜಾಸ್ತಿಯಾಗ್ತಾಇದೆ ಅಂತಿ ರ್ತಾರೆ ಅತ್ತೆಮ್ಮ"

" ಸಾಕು ನಿಲ್ಸೆ "

"....ಇನ್ನು ಉಪವಾಸ ಒಪ್ಪತ್ತು ಅಂತೆಲ್ಲ ವ್ರತನಿಯಮಗಳಿಗೆ ಶುರು ಹಚ್ಚಿದರೋ...."

" ಮುಚ್ಚೇ ಬಾಯಿ...."

" ಫಳಾರದ ಬಾಬ್ತುಗಳಿಂದಾ ಖರ್ಚು ಮಿತಿಮೀರಿದರೆ ಸರಿ ತಾನೆ ? "

" ನಡಿಯೇ ಆಚೆಗೆ...."

" ಅವಳನ್ನ ಗದರಿಸ್ಬೇಡ ಮಗೂ "

" ಹಾಗಂದರೇನಮ್ಮ...."

" ಅವಳನ್ನೋದು ನನಗೂನೂ ನಿಜ ಅನ್ಸುತ್ತೆ ಮರಿ...."

" ನೀವಿಬ್ರೂನೂ ತೊಲಗಿ ಇಲ್ಲಿಂದ"

ಮಾತೆ ಘುಡದಿ ನಿಷ್ಕ್ರಮಣ. ಸುಪುತ್ರನ ಪಲ್ಲವಿ—" ಕಂಡು ಕಂಡು ನೀ ಎನ್ನ....ಬಂಧುಗಳು....ಎನಗಿಲ್ಲ "

—ರಾಮಕೃಷ್ಣ.

ನಿಮ್ಮ ಟೀಕೆಗಾಗಿ

ಜಾನಕಮ್ಮನವರು ನಿದ್ದೆಯಿಂದ ಎದ್ದರು. ಅಡಿಗೆಯ ಹೆಂಗಸು ಮನೆಯಲ್ಲೆಲ್ಲೂ ಇರಲಿಲ್ಲ. ಎಲ್ಲ ಕಡೆಯೂ ಹುಡುಕಿದರು. ಎಲ್ಲೂ ಸಿಗಲಿಲ್ಲ. ತಮ್ಮೊಳಗೆ ತಾವೇ ಆಕೆಯನ್ನು ಯದ್ವಾ ತದ್ವಾ ಬೈದರು. ಗಂಡಸರಿಗೇನು ಗೊತ್ತಾಗುತ್ತದೆ ಹೆಂಗಸರ ಗೋಳು? ಆಫೀಸಿಂದ ಬರುವುದರೊಳಗೆ ಕಾಫಿ ರೆಡಿಯಾಗಿರದಿದ್ದರೆ, ರೇಗುವುದೊಂದು ಬರುತ್ತೆ, ಎಂದು ಪಿಸುಗುಟ್ಟುತ್ತ ತಾವೇ ಒಲೆ ಹೊತ್ತಿಸಿದರು. ಕಾಫಿ ಪುಡಿ ಡಬ್ಬವನ್ನು ಕೆಳಗಿರಿಸಿ, ಚಮಚ ಹುಡುಕಿದಾಗ, "ಕಿಟ್ಟಣ್ಣನ ತಂದೆಗೂ ಕಾಫಿ ಮಾಡಲೇನು?" ಎಂಬ ಸಂದೇಹ ಅಂಕುರಿಸಿತು. ಆಫೀಸಿಂದ ಬರುವಾಗ, ದೊಡ್ಡ ಸಾಹೇಬರ ಮನೆ ಹಾದು ಬರುತ್ತೇನೆ, ಅಂದರಲ್ಲಾ, ಅಲ್ಲಿ, ಕಾಫಿ ಸಿಕ್ಕೇಸಿಕ್ಕುತ್ತೆ, ಅಂದುಕೊಂಡರು. ಈ ಗಂಡಸರು ಮನೆ ಬಿಟ್ಟು ಹೊರಟರೆ, ಎಲ್ಲೆಲ್ಲೋ ಮೇದು ಬರುತ್ತಾರೆ, ಅಂದು ಕೊಂಡರು. ಇವರು ಎಷ್ಟು ಹೊತ್ತಿಗೆ ಬರುತ್ತಾರೆ, ಎಂಬುದೇ ನಿರ್ಧರವಾಗಿ ಹೇಳು ವಂತಿಲ್ಲ, ಅಂದುಕೊಂಡರು. ತಮಗೆ ಮಾತ್ರ, ಒಂದು ಬಟ್ಟಲು, ಒಂದೇ ಒಂದು ಬಟ್ಟಲು ಸಾಕು, ಎಂದು ತೀರ್ಮಾನಿಸಿದರು.

ಒಂದೂವರೆ ಚಮಚ ಪುಡಿ ಹಾಕಿದರು. ಸೋಸಿದರು. ಹಾಲು ಬೆರೆಸಿದರು ಸಕ್ಕರೆ ಸೇರಿಸಿದರು. ಬಟ್ಟಲಿಂದ ಬಟ್ಟಲಿಗೆ ಬದಲಾಯಿಸಿ ಆರಿಸಿದರು. ಬಟ್ಟಲು ಸಹಿತ ಈಚೆ ಬಂದು ಚಾಪೆ ಮೇಲೆ ಕೂತರು.

ಆಗ, ಹೊರಗಡೆ, ರಾಯರ ಸದ್ದಾಯಿತು. ಅರ್ಧ ನಿಮಿಷ ಅನುಮಾನಿಸಿ, ಜಾನಕಮ್ಮನವರು ಬಿರುಬಿರನೆ ಬಾಗಿಲಕಡೆ ಹೋಗಿ, "ಬಂದ ತಕ್ಷಣ, ಸುಸ್ತು ಪರಿ ಹಾರಕ್ಕೆ ಅಂತ, ಇಕೊ!, ಒಂದು ಕಪ್ ಕಾಫಿ ಮಾಡಿದೆ, ನಿಧಾನವಾಗಿ" ಎಂದು ಹೇಳಿ, ರಾಯರ ಕೈಗೆ ಕೊಟ್ಟರು.

ರಾಯರು, ಅದನ್ನು, ಬಾಲ ಆಡಿಸಿಕೊಂಡು, ಕಣ್ಣು ಮುಚ್ಚಿ, ಹೀರಿ, ಆನಂದಿಸಿದರು.

ನಡೆದದ್ದು ಇಷ್ಟು. ಇದನ್ನ ನೀವು ಹೇಗೆ ಟೀಕಿಸುತ್ತೀರಿ?

ಹೆಂಗಸರು ಎಲ್ಲ ಹೀಗೆ ಕಪಟನಾಟಕ ಆಡುತ್ತಾರೆ, ಅಂತೀರೇನು? ಗಂಡಸು ಅದನ್ನ ಒಬ್ಬನೇ ಕುಡಿಯಬಾರದಾಗಿತ್ತು, ಅಂತೀರೇನು? ನನಗೋಸ್ಕರಮಾಡಿದ್ದೆ, ನೀವೇ ಬಸಿದುಕೊಳ್ಳಿ, ಎಂದು ಹೇಳ ಬೇಕಾಗಿತ್ತು, ಅಂತೀರೇನು? ಇಲ್ಲ, ಜಾನಕಮ್ಮ ನವರು ಮಾಡಿದ್ದೇ ಸರಿ, ಸಹಜ, ಅಂತೀರೇನು? ತಮ್ಮ ದಾಹಕ್ಕೆ ತಾವು ಮಾಡಿ ಕೊಂಡ ಕಾಫಿಯನ್ನ ಆ ಧೂರ್ತನಿಗೆ ದಾನಮಾಡಿದ್ದು ತಪ್ಪು, ಗಂಡ ಎಂಬ ಪುರುಷನ ಭಂಡವಾಳ ಶಾಹಿಗೆ ಹೆಂಡತಿ ತುತ್ತಾಗಬಾರದಾಗಿತ್ತು, ಅಂತೀರೇನು?

—ಶ್ರೀಮತಿ ಕೇಸರಿ.

ಕುಂಕುಮದ ಭರಣಿ

ಯಾರೋ ಯಾವುದಕ್ಕೋ ಮೂತಿಗೆ ಹಚ್ಚಿದ ಮಸಿಯನ್ನ ತೊಳೆದುಹಾಕಿ, ಮತ್ತೆ ಸೂರ್ಯದೇವನು ಜಗತ್ತಿಗೆ ಮೆಲ್ಲಮೆಲ್ಲನೆ ಮುಖ ತೋರಿಸುವ ಧೈರ್ಯ ಮಾಡಿದ್ದ....ಅಂದರೆ, ಬೆಳ್ಳಂಬೆಳಗು, ಆರೂವರೆ. ಸೋಮವಾರದ ನಂತರದ ಮಂಗಳ ವಾರ. "ವೀಕ್ಲಿ" ಸೋಮವಾರ ಸಂಜೆ ೬ ಗಂಟೆಗೇ ಬಂದಿತ್ತು.

ನನ್ನ ಮನೆ ಹಜಾರದಲ್ಲೇ ನಿಂತು ಒಬ್ಬ, "ಕುಲಕರ್ಣಿ, ಮಿಸ್ಟರ್ ಕುಲ ಕರ್ಣಿ, ಏಳಿರಪ್ಪ, ಗಂಟೆ ಏಳೂಕಾಲು" ಎಂದು ಅರಚಿದ. ನಾನು ಇನ್ನೂ ಕಂಬಳಿ ಯೊಳಗಿದ್ದೆ. "ಥತ್! ಏನು ಹಾಳು ನಿದ್ದೆಯಪ್ಪ, ಇವನದು? ಏಳಯ್ಯ, ಮಾರಾಯ ಕುಲಕರ್ಣಿ" ಅಂತ ಇನ್ನೂ ಜೋರಾಗಿ ಒದರಿದ. ನಾನು ಏಳಲೇ ಬೇಕಾಯಿತು. "ನಾಚಿಕೆಯಾಗೋಲ್ಲವೇನಯ್ಯ, ಇನ್ನೂ ಗೊರಕೆ ಹೊಡೆಯುವುದಕ್ಕೆ" ಅಂದ. "ಕುಂಭಕರ್ಣಾ" ಎಂಬ ಕೂಗೂ ಕೇಳಿಸಿತು. ಬಾಗಿಲು ತೆಗೆದೆ. "ರಾಜ ಮಹಾ ರಾಜರುಗಳ ದರ್ಶನಕ್ಕೆ ಕೂಡ ಇಷ್ಟು ಒದ್ದಾಡಬೇಕಾಗಿಲ್ಲ....ಏನಯ್ಯ, ಇದು, ನಿನ್ನ ಅಹಂಕಾರ" ಎಂದು ಬೈದ. "ಆ ವೀಕ್ಲಿ ಕೊಡಯ್ಯ, ನಾನು ಹೋಗಬೇಕು, ಹೊತ್ತಾಯಿತು" ಎಂದು ಕೈ ನೀಡಿದ.

"ವೀಕ್ಲೀನೇ! ನಿನ್ನೆ ಸಂಜೆ ಬಂತು, ನಾನಿನ್ನೂ ಒಂದು ಪುಟ ಕೂಡ ಓದಿಲ್ಲ, ಮಧ್ಯಾಹ್ನ ಓದಿಬಿಟ್ಟು, ನಾಲ್ಕು ಗಂಟೆಗೆ ನಿಮ್ಮ ಮನೆಗೆ ಕಳುಹಿಸುತ್ತೇನೆ" ಎಂದೆ. ಆತನಿಗೆ ರೇಗಿತು. ತಾನೇ ದುಡ್ಡುಕೊಟ್ಟು ತರಿಸುತ್ತಿರುವವನ ಹಾಗೆ, ಮುಖ ಕೆಂಚಗೆ ಮಾಡಿಕೊಂಡ. "ಕೊಡಯ್ಯ ಬೇಗ, ನಿನಗೆ ಬೇಕಾದರೆ, ನಾನೇ ನಾಲ್ಕು ಗಂಟೆ ಯೊಳಗೆ ಕಳುಹಿಸುತ್ತೇನೆ" ಎಂದ. ಹಾಳಾದವನಿವನೊಬ್ಬ, ಎಂಬ ಶಾಪದೊಂದಿಗೆ ವೀಕ್ಲೀನ ಅವನ ಕೈಯಲ್ಲಿರಿಸಿದೆ.

ಹಲ್ಲುಜ್ಜಿಕೊಳ್ಳೋಣ, ಅಂತ ಬಾತ್ರೂಮಿಗೆ ಹೋದೆ. "ಕುಲಕರ್ಣಿ"— ಪ್ರಾರಂಭ, ಇನ್ನೊಬ್ಬ. ಆ, ಅಂತ ಬಾತ್ರೂಮಿಂದಲೇ ಓಗೊಟ್ಟೆ. "ವೀಕ್ಲಿ ಬಂತೆ? ಕೊಡು, ಕೊಂಚ ಓದಿ ಕೊಡುತ್ತೇನೆ" ಅಂದ. "ಅದನ್ನ ಮೇಷ್ಟರು ಬಂದು ಈಗ ತಾನೆ ತೆಗೆದುಕೊಂಡು ಹೋದರು" ಅಂದೆ. "ಯಾವಾಗ ತರ್ತಾರಂತೆ?" "ಮಧ್ಯಾಹ್ನ ಮೂರು ಗಂಟೆ ಹೊತ್ತಿಗೆ" "ಹಾಗಾದರೆ, ಅಷ್ಟು ಹೊತ್ತಿಗೆ ಬರ್ತೇನೆ" ಅಂತ ಹೇಳಿ ಶೆಟ್ಟರು ಹೊರಟರು.

ಕಾಫಿ ಬಟ್ಟಲು ಹಿಡಿದು, ಕುರ್ಚಿ ಮೇಲೆ ಕೂತೆ. "ಏನು? ಕಾಫಿ ನೈವೇದ್ಯ ವಾಗುತ್ತಿದೆಯೇನು?" "ಬನ್ನಿ! ಒಂದು ಕಪ್ ತಮಗೂ ಆಗಬಹುದಲ್ಲಾ" "ಆಗ ಬಹುದು; ಅಭ್ಯಂತರವೇನೂ ಇಲ್ಲ" ಕಾಮತ್‌ರು ಕಾಫಿ ಕುಡಿದರು. "ವೀಕ್ಲಿ ಓದಾ ಯಿತೆ?" ಎಂದರು. ಇಲ್ಲ, ಸ್ವಾಮಿ! ಇನ್ನೂ ಬಿಚ್ಚಿ ನೋಡೇಇಲ್ಲ" "ಪರವಾಗಿಲ್ಲ!

ಮನೆಗೆ ತೆಗೆದುಕೊಂಡು ಹೋಗಿ, ಈಗಲೇ ವಾಪಸ್‌ಮಾಡಿ ಬಿಡುತ್ತೇನೆ", ಅಂತ ಅವರೂ ಪ್ರಾರಂಭ. "ವೀಕ್ಲೀನ ಬೆಳಕು ಹರಿಯುತ್ತಲೂ ಮೇಷ್ಟರು ಬಂದು ತೆಗೆದು ಕೊಂಡು ಹೋದರು" ಅಂದೆ. ಆತ ನಂಬಲಿಲ್ಲ. "ಈ ವರಿಸೇನೆಲ್ಲ ನನ್ನ ಹತ್ರ ತೆಗೀತಿಯಲ್ಲಾ" ಅಂತ, ಮೀಸೆ ತಿರುವಿದ. "ಹೇಳಿದ ಟೈಮಿಗೆ ಸರಿಯಾಗಿ ನಾನು ವಾಪಸ್ ಕೊಡುತ್ತಾ ಇಲ್ಲವೆ?" ಅಂದ. "ನಾನು ಓದಿಬಿಟ್ಟರೆ, ಅಚ್ಚೆಲ್ಲ ವಾಸಿ ಹೋಗುತ್ತದೇನಯ್ಯ" ಎಂದು, ದೂರಿದ. "ದೇವರಾಣೆಗೂ, ಇಲ್ಲಿಲ್ಲ ಕಣೋ" ಅಂದೆ. "ಬಿಡೋ ಬಿಡೋ ಕಂಡಿದೇನೆ ನಿನ್ನ ದೈವಭಕ್ತಿ! ಐನಾತಿ ಕಳ್ಳ ನೀನು" ಅಂತ ಹೇಳಿ, ಹೊರಟೇಹೋದ.

ಆತ ಅತ್ತಲಾಗೆ ಹೋಗುತ್ತಲೂ, ಜೋಷಿ ಬಂದ. "ನಾನು ಬರುತ್ತೇನೆ, ಅದನ್ನ ಕೇಳುತ್ತೇನೆ, ಅಂತ ತಿಳಿದೂ ನೀವು ಅದನ್ನ ನನಗೆ ಮೊದಲೇ ಮೇಷ್ಟರಿಗೆ ಏಕೆ ರವಾನಿಸಿದಿರಿ? ನಿಮಗೆ ಸಮಯ ಸಂದರ್ಭ ಅಂದರೆ, ಒಂದು ಎರಡು ಸಾಲ ಕೂಡ ಬೇಕಾದರೆ ನಾನು ಬೇಕು. ಇಂಥದ್ದಕೆಲ್ಲ ನಿಮಗೆ ಮೇಷ್ಟರೇ ಹೆಚ್ಚು ದೋಸ್ತಿ ಯಾದರೇನು? ಇರಲಿ, ಪರವಾಯಿಲ್ಲ, ನೋಡಿಕೊಳ್ಳುತ್ತೇನೆ, ನಿಮ್ಮ ಅಂತರಂಗ ಗೊತ್ತಾಯಿತು" ಎಂದು ಗೊಣಗುತ್ತ, ಜೋಷಿ ಬೀದಿಗಿಳಿದ.

ತಕ್ಷಣ ಕಾಣಿಸಿಕೊಂಡ, ಶರ್ಮ. ಮೇಷ್ಟರ ಮನೆಗೆ ೩ ಗಂಟೆಗೆ ಹೋಗಿ, ಅಲ್ಲಿಂದಲೇ ಅದನ್ನು ತೆಗೆದುಕೊಂಡು ಹೋಗಿ, ಓದಿ ಮುಗಿಸಿ, ರಾತ್ರಿ ಕ್ಲಬ್ಬಿಂದ ಬರುವಾಗ ಮನೆಯಲ್ಲಿ ಕೊಟ್ಟು ಹೋಗುತ್ತೇನೆ, ಅಂತ ಹೇಳಿ, ಅವನೂ ನಿಷ್ಕ್ರಮಿಸಿದ.

ಸಬ್ ರಿಜಿಸ್ಟ್ರಾರೊಬ್ಬರು ಮಾತ್ರ ಖುದ್ದಾಗಿ ತಾವೇ ಬರಲಿಲ್ಲ. ಅವರಿಗೆ ಜ್ವರ. ಆದ್ದರಿಂದ, ಆಳನ್ನು ಕಳುಹಿಸಿದರು. "ಶನಿವಾರ ಬಂದರೆ, ಕೊಡುತ್ತೇನೆ, ಅಂತ ಹೇಳು" ಎಂದು ಹೇಳಿಕಳುಹಿಸಿದೆ. ಮತ್ತೆ ಸಬ್ ರಿಜಿಸ್ಟ್ರಾರ್ ಭೆಟ್ಟಿಯಾದರೆ, ನಾನು ಹೇಳಿದ್ದು ಹಾಗಲ್ಲ. ಬುಧವಾರ ಅಂತ ಹೇಳಿದ್ದನ್ನ ಅವನು ತಪ್ಪು ತಿಳಿದುಕೊಂಡಿರ ಬೇಕು ಎಂದು ಹೇಳೋಣ ಎಂದು ನಾನೂ ನಿಶ್ಚಯಿಸಿದೆ.

ಅಷ್ಟು, ಹೊತ್ತಿಗೆ, ಮೇಷ್ಟರ ಮಗಳು ಬಾಗಿಲು ತಟ್ಟಿದಳು. "ನೀವು ಕೊಟ್ಟದ್ದು ಹೋದ ವಾರದ ವೀಕ್ಲಿಯಂತೆ....ನಿನ್ನೆ ಬಂದದ್ದನ್ನ ಕೊಡಬೇಕಂತೆ" ಎಂದಳು. ಮನೆಯೆಲ್ಲ ಹುಡುಕಿದೆ, ಸಿಗಲಿಲ್ಲ. ಆಗ, ನನ್ನ ಪ್ರೇಮದ ಪುತ್ಥಳಿ ಕಾಣಿಸಿಕೊಂಡಳು; ಏನು ಹುಡುಕುತ್ತಿದೀರಿ, ಅಂತ ದಯಾರ್ದ್ರ ಹೃದಯದಿಂದ ವಿಚಾರಿಸಿದಳು. ಅಯ್ಯೋ! ವೀಕ್ಲೀನ ನಾನು ನಿನ್ನೆ ಸಂಜೆ ನನ್ನ ಫ್ರೆಂಡು ಪಂಡರೀ ಬಾಯಿಗೆ ಕೊಟ್ಟೆ; ಅವಳು ಕಳುಹಿಸಿದ ಒಂದು ಕಥೆ ಬಂದಿದೆಯೋ ಏನೋ ನೋಡಿ ಕೊಡುತ್ತೇನೆ, ಅಂದಳು, ನಾಳೆಯೇ ನಾಳದ್ದೋ ಅತ್ತಲಾಗೆ ಹೋದಾಗ, ಇಸು ಕೊಂಡು ತರುತ್ತೇನೆ ಅಂದಳು.

ಮೇಷ್ಟರ ಮಗಳಿಗೆ ಕುಂಕುಮದ ಭರಣೀನ ಅವಳೇ ತೋರಿಸಿದಳು.

ಬೆಂ. ಚೀ ಕುಲಕರ್ಣಿ

ಸೀಟಿಲ್ಲ



ಭಾರತ ದೇಶದ ಪ್ರಜೆ, ಆ ಕಿಟ್ಟ
ವೋಟನು ಕೊಟ್ಟ; ಜೈ ಹಿಂದ್ ಕೂಗಿದ;
ಉತ್ತಮ ಪೌರ,— ಪ್ರಯಾಣ ಕಾಗಿ
ಟಿಕೀಟುಕೊಂಡ, ರೈಲಿಗೆ ಹೋದ.
ಡಬ್ಬಿಯಸಾಲಿಗೆ ಉಬ್ಬುತ ನಡೆದ
ಬಾಗಿಲ ಹಿಡಿಯನು ಬಗ್ಗಿಸಿ ನುಗ್ಗಿದ
ಪೋ ಪೋ ಎಂದರು, ಒಳಗಿನ ಜನಗಳು!
ಮಿಲಿಟರಿ ನಾವು, ನಮಗೇ ಮೀಸಲು!
ಸ್ತ್ರೀಯರು ಮಾತ್ರ ಕೂರಲು ಬೇಕು!
ಶಾಲೆಯ ಹುಡುಗರು, ಆ ಕಡೆ ಹೋಗಿರಿ!
ಒಂದನೆ ಕ್ಲಾಸಿನ ಕೂಲಿಗಳಾವು,
ಬೀಗವ ಹಾಕಿದೆ, ತೆರೆಯಲ ಬಾರದು,
ಕಿಟಕಿಯೊಳಗಿಂ ಧಾವಿಸೆ ತಪ್ಪು,
ಗಾರ್ಡಿನ ಗಾಡಿ, ಮೇಲಿನ ಪೆಟ್ಟಿಗೆ,
ಹೋಟಲು ಡಬ್ಬಿ, ಬೇಗನೆ ಇಳಿಯೋ,
ಒಳಗೇ ನೂಕಲು, ಹಾಕಿರಿ ಬಾಗಿಲು,
ನಾಳೇ ಬಾರೋ, ಹಾಳಾ ಮೂಳಾ,
ಇನ್ನೂರಕ್ಕಿಂ ಹೆಚ್ಚಿನ ಪಯಣ
ಹೋಗುವವರಿಗೇ ಇಲ್ಲಿಯ ಸೀಟು,
ಎಂದರು ಕಿಟ್ಟಿಗೆ, ಕೆಟ್ಟನು ಕಿಟ್ಟನು.
ಸೀಟೇ ಇಲ್ಲವು, ರೈಲಲ್ಲಿ
ತಬ್ಬಿಬ್ಬಾದನು, ಭಾರತವೀರ.

ಬದುಕುವದಾರಿ ಅಥವಾ ಜೀವನಕಲೆ

ಬದುಕುವುದಕ್ಕೆ ಮಾತ್ರವೇ ಅಲ್ಲ, ಚೆನ್ನಾಗಿ ಬದುಕುವುದಕ್ಕೂ ಕೆಳಕಂಡ ಸೂಚನೆಗಳು ಅತ್ಯಮೂಲ್ಯವಾದುವು. ಇತರ ಎಲ್ಲರಿಗಿಂತ ನಾವು ಬುದ್ಧಿವಂತರು, ಎಂಬ ಅಭಿಪ್ರಾಯ ಆ ಇತರರಲ್ಲಿ ಮೂಡಿಸುವುದೇ ಅವರ ಅಸೂಯೆ ಮತ್ತು ಗೌರವ ಗಳನ್ನು ಸಂಪಾದಿಸಲು ರಾಜಮಾರ್ಗ. ಇದು ಒಂದು ಕಲೆ, ಅಪೂರ್ವ ಸಾಮರ್ಥ್ಯ, ಅಭ್ಯಾಸದಿಂದ ಪಡೆಯಬಹುದಾದದ್ದು. ಸರಸ ಸಂಭಾಷಣೆ, ಶುಚಿಯಾದ ಆದರೂ ಷೋಕಿ ಹೀನವಾದ ಉಡುಗೆ ತೊಡಿಗೆ, ಅಗಲವಾದ ಮಂದಸ್ಮಿತ, ಇವು ಜೀವನ ಕಲೆ ಗಾರನಿಗೆ ಅತ್ಯಗತ್ಯ. ಅವನು ಬಾಯಿ ತೆರೆದರೆ, ಉಳಿದವರು ಅನಮಾಧಾನಗೊಳ್ಳ ಬೇಕು; ಆತ ಪ್ರವೇಶಿಸಿದರೆ, ಅಲ್ಲಿರುವವರಿಗೆಲ್ಲ ಹೊಟ್ಟೆ ಉರಿಯಬೇಕು. ಆತನ ಅಭಿಪ್ರಾಯವನ್ನರಿಯಲು ಎಲ್ಲರೂ ಕಿವಿನೀಡಿ ಕುಳಿತಿರಬೇಕು.

ಇದಕ್ಕೆ ಒಂದು ಉಪಾಯವಿದೆ. "ಆಸಾಂನಲ್ಲಿ ಭಾರಿ ಪ್ರವಾಹವಾಯಿ ತಂತಲ್ಲಾ....ಅದಕ್ಕೆ ಕಾರಣವೇನು ಗೊತ್ತೆ?" "ಕಮ್ಯೂನಿಸ್ಟರ ಮುಂದಿನ ಪಿತೂರಿ ಏನು ಗೊತ್ತೆ? "ಎಂಬಿವೇ ಮೊದಲಾದ ಪ್ರಶ್ನೆಗಳನ್ನು ಹಾಕಿ, ಇತರರ ಆ....ಊ.... ಎಂದು ತಲೆ ಕೆರೆದುಕೊಳ್ಳುತ್ತಿರುವಾಗಲೇ, ನಾವು ಉತ್ತರ ಹೇಳಿಬಿಡಬೇಕು; ಆಗ, ಅವರೆಲ್ಲಾ ಪೆಚ್ಚಾಗುತ್ತಾರೆ. ಜೀವನ ಕಲೆಯ ಪ್ರಥಮ ಅಧ್ಯಾಯವೇ ಇದು. ಅಥವಾ, "ಇದೇನಿದು? ಈಚೆಗೆ ನಿಮ್ಮ ಮುಖದಲ್ಲಿ ಹೊಸ ಕಳೆ ಬಂದಿದೆಯಲ್ಲಾ" ಎಂದು ಹೇಳುತ್ತ, ಎದುರಿಗಿರುವವರ ಬೆನ್ನ ಮೇಲೆ ಗುದ್ದಿ; ಆಗ, ಆತ ಪೆಚ್ಚಾಗುತ್ತಾನೆ, ನೀವು ಹೆಚ್ಚಾಗುತ್ತೀರಿ, ಉಳಿದವರ ಅಭಿಪ್ರಾಯದಲ್ಲಿ.

ಮತ್ತೊಂದು ಉಪಾಯವೂ ಇದೆ. ಕ್ಲಬ್ಬಿನಲ್ಲಿ ಯಾರಾದರೂ ಒಬ್ಬರು ಹಾಸ್ಯಕಥೆಯನ್ನು ಹೇಳುವಾಗ, ಝುಂ, ಅಂತ ತುಟಿತೆರೆಯದೆ ಕುಳಿತಿರಿ. ಇತರರೆಲ್ಲ ನಗಲಿ, ಪಕ್ಕೆ ಹಿಡಿದುಕೊಳ್ಳಲಿ, ನೀವು ಮಾತ್ರ ನಿಮ್ಮ ಕಹಿಎಣ್ಣೆ ಮೂತೀನ ತಿದ್ದ ಬೇಡಿ. ಆಗ, ನಕ್ಕವರೆಲ್ಲರೂ ನಾಚಿಕೆಯಿಂದ ತಲೆ ತಗ್ಗಿಸುತ್ತಾರೆ. ಹಾಸ್ಯಕಥೆ ಯಲ್ಲಿ ಹಾಸ್ಯವೇ ಇಲ್ಲವೆಂಬುದು ನಿಮ್ಮ ತೀರ್ಮಾನವಾದ್ದರಿಂದ, ತಾವು ನಕ್ಕಿದ್ದು

ಮಹಾಪರಾಧ, ತಮಗೆ ನಿಮ್ಮಷ್ಟು ಬುದ್ಧಿ ಸೂಕ್ಷ್ಮತೆಇಲ್ಲವೆಂದು ಅವರು ನಾಚಿಕೊಳ್ಳು ತ್ತಾರೆ. ಹಾಸ್ಯದ ಕಥೆ ಹೇಳಿದ ಆಸಾಮಿಯೂ ಕೂಡ, ತಮ್ಮ ಕಥೆಯಲ್ಲಿ ಅತಿ ಅಶ್ಲೀಲತೆ ಇತ್ತೋ ಏನೋ, ತಾವು ಅದನ್ನ ನಮ್ಮಂಥ ಸಭ್ಯರೆದುರು ಹೇಳಬಾರ ದಾಗಿತ್ತೋ ಏನೋ ಎಂದು ಹೆದರಿ, ಹೊರಕ್ಕೆ ಹೊರಟು ಹೋಗುತ್ತಾರೆ. ನಮ್ಮ ಬೆಲೆ ಏರುತ್ತೆ.


ಬೇರೊಂದು ಬಾಣವನ್ನು ಹೂಡಬಹುದು. ಜಾಣತನದ ಒಂದು ಪದ ಪಂಕ್ತಿ ಯನ್ನಾಗಲಿ, ಕಥೆಯನ್ನಾಗಲಿ, ಯಾರಾದರೂ ಹೇಳಿ, ಇತರರ ಮೆಚ್ಚುಗೆ ಪಡೆಯಲು ಯತ್ನಿಸಿದಾಗ, ನೀವು ಗಂಭೀರವಾಗಿ ಕುಳಿತಲ್ಲೇ ಕುಳಿತು, "ಹೌದು! ಜೋಲಾದಲ್ಲಿ ಓದಿದೇನೆ." "ಹೌದು! ಕಿಚಿಲಿಂಗ್‌ನ್ಕಿ ನಾಟಕದಲ್ಲಿ ಈ ಮಾತು ಬರುತ್ತೆ" "ಕಪ್ಲಾನ್ ಹೇಳಿದ್ದಲ್ಲವೆ ಅದು?" "ಪೇರುದೇಶದ ನೊಬಲ್ ಕವಿಯ ಅಭಿಪ್ರಾಯ, ಅದು" ಎಂದು ಧೈರ್ಯವಾಗಿ ಹೊಡಿಯಿರಿ. ನಿಮ್ಮಷ್ಟು ವಿಶ್ವಸಾಹಿತ್ಯವನ್ನು ಅವರು ಯಾರೂ ಖಂಡಿತ ಓದಿರುವುದಿಲ್ಲ—ನಿಮ್ಮನ್ನ ಅವರು ವಿದ್ಯಾರಾಕ್ಷಸನೆಂದೇ ಬಗೆದು ಪೂಜಿಸಿ ಅಸೂಯಾ ಪುಷ್ಪಗಳಿಂದ ಆರಾಧಿಸುವರು.

(ಸಶೇಷ) —ಪಾಟೀಲ.

—o—



" ನೋಡಿ, ಮೊದಲು ಈ ಹಾಳು ಆಟಂ ಬಾಂಬುಗಳನ್ನು
ಸುಟ್ಟು ಹಾಕಬೇಕು—ಆಂದರೆ ಜಗತ್ತಿಗೆ ಶಾಂತಿ ಸಿಕ್ಕೀತು!"



ನಶ್ವರ

“ ಇದೇನೂಂದ್ರೆ ಇಷ್ಟೊತ್ತು ? ”
“ ಗುಡೀಗ್ಹೋಗಿದ್ದೆ ಕಣೆ ಇವೊತ್ತು! ”
“ ಎತ್ಕಡೇಂದ ಹೊತ್ಮೂಡಿತೂಂದ್ರೆ! ”
“ ಅದ್ನೇ ಹೇಳ್ತೀನಿ ಕೇಳೂಂದ್ರೆ ”
“ ಕುಂಕ್ಮಾ ಜೇರಿ ಹಣೇ ಮೇಲೆ! ”
“ ಲೈಫೇ ಬದ್ಲಾಯ್ಸಿದ್ಮೇಲೆ! ”
“ ಇದೇನಪ್ಪಾ ವಿಪತ್ತು! ”
“ ಹರಿಕಥೆ ಏನ್ ನೊಗ್ಸಾಗಿತ್ತು! ”
“ ಪ್ರಳಯಾಂತ ಕಾಣ್ಸುತ್ತೆ ಇವೊತ್ತು! ”
“ ಬದುಕಂಬೋದು ನೀರ್ ಮೇಲ್
ಗುಳ್ಳೆ....”
“ ಅಲ್ವೆ ಮತ್ತೆ ಗುಳ್ಳೆ ? ”
“ ಧನ ಕನಕ ಸುಖ ಸಂಪತ್ತು....”
“ ದಾಸರ ಮಾತು—ನನಗ್ಗೊತ್ತು ”
“....ನಶ್ವರ ಕಣೆ ನಶ್ವರ”
“ ನಿಲ್ಸೀಂದ್ರೆ ಆಸ್ವರ”
“ ನಶ್ವರ ಕಣೆ ನಶ್ವರ”
“ ನಾನ್ ಹೇಳಿದ್ ತಂದ್ರಾ ? ”
“ ಎಲ್ಲಾನೂ ನಶ್ವರ”
“ ಮೈಸೂರ್ ಸಿಲ್ಕ್ ತಂದ್ರಾ ?
“ ನಶ್ವರ ಕಣೆ ನಶ್ವರ”
“ ಹಾಯ್ ಹಾಯ್ ಜಗದೀಶ್ವರ! ”

—ಸರೋಜಿನಿ.

—o—

★

ಹಿಂದಿ ಪಾಠ-೧

ಹಿಂದಿ ಭಾಷೆ ಕಲಿಯುವುದು ಬಹು ಸುಲಭ. ಕಲಿಸುವುದು ಅದಕ್ಕಿಂತ ಸುಲಭ. ಕಲಿತಿದೇವೆ ಅಂತ ತೋರ್ಪಡಿಸುವುದು ಎಲ್ಲಕ್ಕಿಂತ ಸುಲಭ.

ನಿಮಗೆ ಆಗಲೇ ಹಿಂದಿಯ ಅರಿವು ಚೆನ್ನಾಗಿದೆ; ಆದರೆ, ಚೆನ್ನಾಗಿದೆ ಎಂಬುದನ್ನು ನೀವು ಅರಿತಿಲ್ಲ, ಅಷ್ಟೆ.

ನಾಮ ಪದಗಳು ಹಿಂದಿಯಲ್ಲಿ ಬಲು ಸಲೀಸಾಗಿ ಸೃಷ್ಟಿಯಾಗುತ್ತವೆ. ಪುಲ್ಲಿಂಗಕೆಲ್ಲ ಜೀ ಸೇರಿಸಿದರೆ ತೀರಿತು, ಹಿಂದಿಯಾಗುತ್ತದೆ.

ತಮ್ಮಯ್ಯ	ತಮ್ಮಯ್ಯಾ ಜೀ
ರಾಂ ರಾಂ	ರಾಂ ರಾಂ ಜೀ
ರಾಜಾ	ರಾಜಾ ಜೀ

ಹಾಗೆಯೇ, ಸ್ತ್ರೀ ಲಿಂಗನಾಮಗಳಿಗೆಲ್ಲ ದೇವೀ ಎಂದು ಸೇರಿಸುತ್ತ ಹೋಗಿ. ದೇವೀ ಎಂದು ಹೇಳಲು ಮನ ಬರದೆ ಹೋದರೆ, ಬಾಯಿ ಎಂದು ಹೇಳಲು ಅಡ್ಡಿ ಇಲ್ಲವಲ್ಲಾ.

ರುದ್ರಮ್ಮ	ರುದ್ರಮ್ಮಾ ದೇವೀ
ಸುಬ್ಬಮ್ಮ	ಸುಬ್ಬಮ್ಮಾ ದೇವೀ
ಕೇಸರಿ	ಕೇಸರೀ ದೇವೀ.

ಕ್ರಿಯಾ ಪದಗಳಿಗೆಲ್ಲ ಹೈ ಅಥವಾ ಹೋ ಎಂದು ಸೇರಿಸುತ್ತ ಬಂದರೆ, ಹಿಂದಿಯಾಗುತ್ತದೆ. ವಾಕಿಂಗ್ ಹೈ, ಲಿಖತೆ ಹೋ ಎಂಬುದನ್ನು ನೋಡಿರಿ. ಹೀ ಎಂದರೆ ಹೀಯಾಳಿಸಿದಂತಾಗುತ್ತದೆ.

ಸಾಮಾನ್ಯವಾಗಿ, ಎಲ್ಲ ಸಂಸ್ಕೃತ ಮಾತುಗಳನ್ನೂ ಮೊಟಕುಮಾಡಿ ಉಚ್ಚರಿಸಿದರೆ, ಹಿಂದಿ ಮಾತುಗಳು ತಾವಾಗಿಯೇ ತಯಾರಾಗುತ್ತವೆ. ಸ್ವರ, ಸ್ವರ್, ಸರೋವರ, ಸರೋವರ್, ಭೂಷಣ, ಭೂಷಣ್, ಕೆಂಗಲ್ಲು, ಕೆಂಗಲ್, ಇತ್ಯಾದಿ.

(ಸಶೇಷ)

ಅಂದಹಾಗೆ ಆಯಿತು

ಕಾವೇರಿ ಸಂಕ್ರಮಣ. ಆಬಾಲವೃದ್ಧರೂ ತಾವು ಸಂಚಯಿಸಿದ್ದ ಪಾಪದ ಹೊರೆಯನ್ನು ಹೊತ್ತು ತಂದು ತಲಕಾವೇರಿಯಲ್ಲಿ ತೇಲಿಬಿಟ್ಟು ಅನಾಯಾಸವಾಗಿ ದೊರೆಯುವ (ಆದರೂ ಬಸ್ಸಿನಲ್ಲಿ ಗರುಡವಾಹನವಾಗುವುದರಿಂದಲೂ ಭಾಗಮಂಡಲ ದಿಂದ ಮೇಲಕ್ಕೆ ಮೂರು ಮೈಲಿಯ ಜಾರಿಕೆ ಬೆಟ್ಟವನ್ನು ಏರಬೇಕಾಗಿರುವುದರಿಂದಲೂ ಸ್ವಲ್ಪ ಪ್ರಯಾಸದಿಂದಲೇ ದೊರೆಯುವ) ಪುಣ್ಯವನ್ನು ಯಥೇಚ್ಛವಾಗಿ ಹೇರಿಕೊಂಡು ತಂಡೋಪತಂಡವಾಗಿ ತಮ್ಮ ತಮ್ಮ ಊರುಗಳನ್ನುದ್ದೇಶಿಸಿ ಹಿಂತಿರುಗುತ್ತಿದ್ದಾರೆ. ಸಹಿಷ್ಣುತೆಯಲ್ಲಿ ಭೂಮಾತೆಯನ್ನೂ ಮೀರಿಸುವ ರೀತಿಯಲ್ಲಿ ಬಸ್ಸುಗಳು ಅಸಂಖ್ಯ ಜನರನ್ನು ತನ್ನ ಉದರದಲ್ಲಿ ಧರಿಸಿದ್ದುದಲ್ಲದೆ ಅವರು ಆರ್ಜಿಸಿ ತಂದ ಪುಣ್ಯರಾಶಿ ಯನ್ನೂ ಹೊರಲಾರದೆ ಹೊತ್ತು, ಭಾರಕ್ಕೆ ಕುಸಿದು, ಚಲಿಸಲಾರದಿದ್ದರೂ ಪುಣ್ಯಾ ತ್ಮರ ಸೇವೆಯನ್ನು ಸಲ್ಲಿಸದಿರಬಾರದೆಂದು ಮುಕ್ಕರಿಯುತ್ತಾ ಮುಂದೆ ಸಾಗುತ್ತಿವೆ....

ಇಷ್ಟೆಲ್ಲಾ ಯಾಕೆ ಹೇಳುತ್ತಿರುವೆನೆಂದರೆ ನಾನೂ ಸಂಕ್ರಮಣದಲ್ಲಿ ತಲಕಾವೇರಿಗೆ ಹೋಗಿದ್ದೆ. ಯಥಾಶಕ್ತಿ ಪುಣ್ಯವನ್ನೂ ಕಟ್ಟಿಕೊಂಡು ಬಂದೆ ಅನ್ನಿ; ಅದೇನೂ ಹೇಳಿಕೊಳ್ಳುವ ವಿಷಯವಲ್ಲ. ಆದರೆ ನೋಡಿ, ಪುಣ್ಯವಂತರ ಮಾತಿನ ಮಹಿಮೆ ಎಷ್ಟು ಅನ್ನುವುದಕ್ಕೆ ಹೇಳುತ್ತೇನೆ. ಅವರು ಕಲ್ಲನ್ನು ನೀರಾಗು ಅಂದರೆ ಆಗಬೇಕು ನೀರನ್ನು ಕಲ್ಲಾಗು ಅಂದರೆ ಆಗಬೇಕು. ಇದಕ್ಕೆ ನಾನು ಕಣ್ಣಾರೆ ಕಂಡ ನಿದರ್ಶನ ವನ್ನು ಹೇಳುತ್ತೇನೆ. ಸುಳ್ಳೋ ನಿಜವೊ ನೀವೇ ಯೋಚಿಸಿ.

ನಾನು ಕುಳಿತಿದ್ದ ಬಸ್ಸಿನಲ್ಲಿ ೩೦ ಮಂದಿ ಕೂಡಬೇಕೆಂದಿತ್ತು. ಆದರೂ ಸುಮಾರು ೫೦ ಜನ ಕುಳಿತಿದ್ದರು. ಇನ್ನೂ ಯಾರೂ ಹಿಡಿಸುವಂತಿರಲಿಲ್ಲ. ಕಂಡಕ್ಟರ್ ಸ್ವಲ್ಪ ಬಿಗಿಯಾಗಿಯೇ ಇದ್ದ. ಆದರೆ ಒಂದು ಮುದುಕಿ ಜನಗಳ ಗುಂಪನ್ನು ಭೇದಿಸಿ ಕೊಂಡು ಬಸ್ಸಿನೊಳಕ್ಕೆ ನುಗ್ಗಲಾರದೆ ಗೋಳಿಡುತ್ತ ಹೊರಗೆ ನಿಂತಿದ್ದಳು. ಆಕೆಗೆ ೬೦ರ ವಯಸ್ಸಿರಬಹುದು. ಋಷಿಪಂಚಮಿ ಉದ್ಯಾಪನೆಯನ್ನು ತೀರಿಸಿ ನೋಡುವು ದಕ್ಕೆ ಬಹಳ ನಿಷ್ಠೆಯ ಹೆಂಗಸೆಂದು ಕಾಣುತ್ತಿದ್ದಳು. ತಲಕಾವೇರಿಯಲ್ಲಿ ಮಡಿ ಮೈಲಿಗೆ ಸರಿಬೀಳದೆ ಸ್ವಯಂಪಾಕಕ್ಕೆ ಅನುಕೂಲವಿಲ್ಲದಿದ್ದುದರಿಂದ ಆಕೆಗೆ ಹಿಂದಿನ

ದಿನದಿಂದಲೂ ಉಪವಾಸ. ಅದುವರೆಗೆ ಹತ್ತಾರು ಬಸ್ಸುಗಳು ಹೋಗಿದ್ದರೂ ಒಂದ ರಲ್ಲೂ ಸ್ಥಳ ಸಿಕ್ಕಲಿಲ್ಲ. ನಮ್ಮ ಬಸ್ಸಿನ ಡ್ರೈವರಿಗೆ ಪುಣ್ಯದ ಸಾಕಾರವಂತಿದ್ದ ಆಕೆಯ ಮೇಲೆ ಕನಿಕರ ಬಂತು. ಹೇಗಾದರೂ ಮಾಡಿ ಸ್ಥಳ ದೊರಕಿಸಿಕೊಡುವಂತೆ ಕಂಡ ಕ್ಟರಿಗೆ ನೇಮಿಸಿದ. ಕಂಡಕ್ಟರು ಆಕೆಯನ್ನು ಕರೆದು, ಎಲ್ಲಿ ಕೈಕಾಲುಗಳು ಮುರಿದು ಕೈಗೆ ಬಂದಾವೊ ಎಂಬಂತೆ ತುರುಕಿ ಆಕೆಯನ್ನು ಒಳಕ್ಕೆ ಸೇರಿಸಿದ. ಬಸ್ ಹೊರಟಿತು.

ಪಾಪ! ಮೊದಲೇ ಶಿಥಿಲವಾದ ದೇಹ. ಯಾತ್ರೆಯಿಂದಾದ ಆಯಾಸ. ಹಿಂದಿನ ದಿನದಿಂದ ಹೊಟ್ಟೆಗಿಲ್ಲದಿದ್ದುದರಿಂದಾದ ಹಸಿವಿನ ಸಂಕಟ. ಜೊತೆಗೆ ಕಂಡಕ್ಟರನ ವಿನೀತ (!) ಸೇವೆ. ಎಲ್ಲವೂ ಸೇರಿ ಆಕೆಯ ತಾಳ್ಮೆಯನ್ನು ಹದಗೆಡಿಸಿದ್ದವು. ಈ ಎಲ್ಲ ಕಷ್ಟಗಳಿಗೂ ಆಕೆ ತನ್ನ ಕರ್ಮವನ್ನೇ ಗುರಿ ಮಾಡಿ ಮನಸಾ ತನ್ನನ್ನೇ ಶಪಿಸಿ ಕೊಳ್ಳುತ್ತಿದ್ದಳು. ಒಮ್ಮೊಮ್ಮೆ ಅವಳ ಶಾಪದ ನುಡಿಗಳು ಅವಳಿಗೇ ಅರಿವಿಲ್ಲದಂತೆ ಅವಳ ಬಾಯಿಂದ ಹೊರಬಿದ್ದು ಪ್ರಯಾಣಿಕರ ಕಿವಿಯನ್ನು ಮುಟ್ಟುತ್ತಿತ್ತು. ತೀರ್ಥ ಸ್ನಾನ ಮಾಡಿ ಪುಣ್ಯಶರೀರಿಯಾಗಿ ಬಂದಿದ್ದರೂ ಮತ್ತೆ ಬಸ್ಸಿನಲ್ಲಿ ಹಡೆವ್ಯೆಲಿಗೆಯ ನಡುವೆ ಕೂಡಬೇಕಾಯಿತಲ್ಲಾ ಎಂದು ಅವಳ ಹೃದಯ ವೇದನೆಗೊಳ್ಳುತ್ತಿತ್ತು. ಆ ಹೊತ್ತಿಗೆ ಸರಿಯಾಗಿ ಆಕೆಯಮುಂದೆ ಕೂತಿದ್ದ ಒಬ್ಬ ಗ್ರಾಮಸ್ಥ, ತೀರ್ಥಸ್ನಾನದ ನಿಮಿತ್ತ ಎಷ್ಟು ವೇಳೆಯಿಂದ ತಡೆದುಕೊಂಡಿದ್ದನೋ ಏನೋ, ಸೇದುವುದಕ್ಕೆಂದು ಜೇಬಿನಿಂದ ಒಂದು ಬೀಡಿ ಸೆಳೆದು, ಅದರ ಹಿಂಬದಿಯಿಂದ ಒಮ್ಮೆ ಊದಿ ಬಾಯಲ್ಲಿ ಕಚ್ಚಿಕೊಂಡ. ಅದನ್ನು ಕಂಡಕೂಡಲೇ ಆ ಮುದುಕಿಯ ಸಹನೆಯ ಎಲ್ಲೆ ಮೀರಿತು. ಎಂತೆಂತಹ ಜಿತೇಂದ್ರಿಯರೆನಿಸಿದ ಋಷಿಗಳಿಗೂ ಸಮಯದಲ್ಲಿ ತಾಳ್ಮೆಯಿಂದಿರುವುದು ಸಾಧ್ಯವಿಲ್ಲವೆನ್ನುವಾಗ ಮುದುಕಿಯ ಪಾಡೇನು? ಆಕೆ ಕೆಣಕಿದ ಸಿಂಹಿಣಿಯಂತೆ ಆಕ್ರೋಶಗೊಂಡವಳಾಗಿ "ನಿನ್ನ ಬೀಡಿಗೆ ಬೆಂಕಿ ಹಾಕ, ನಿನ್ನ ಬಾಯಿ ಸೇದ" ಎಂದು ಶಪಿಸಿಯೇ ಬಿಟ್ಟಳು. ಪುಣ್ಯವಂತರ ನುಡಿ ತಪ್ಪುವುದಕ್ಕುಂಟೆ? ಹಾಗೆಯೇ ಆಯಿತು.

—ನ. ಸು.

— o —

ಸಂಸ್ಕೃತದ ಮಾತು—
ನನಗೆರಡೆ ಗೊತ್ತು :
" ಸ್ವಯಮೇವ ಮೃಗೇಂದ್ರತಾ "
" ಸ್ವಯಮೇವ ಸಚಿವಾಂಧತಾ "

ಸಾಹಿತಿಯ ಸೌಭಾಗ್ಯ

ಮುಚ್ಚಂಜೆ—ಸುಳಿಗಾಳಿ—ದೂರದ ಬೆಟ್ಟ—ಹಾರುವ ಹಕ್ಕಿ—ಹಸಿರು ಹುಲ್ಲು—ಹಾಸುಗಲ್ಲು—ಹುರಿಗಾಳು—ಹರೆಯದ ಹುಡುಗ—ಎಸಳು ಮೂಗು—ಚಿಗುರು ಮೀಸೆ ಉಗುರು ಕಚ್ಚು—ಹೊ! ಕವಿ ಹೃದಯ—ಅರಳಿದ ತಾವರೆ—ಮನದ ವೇಗ—ವೈಮರಿತ ಆವೇಶ—ಹೊರಟಿತ್ತೈ ಕಾವ್ಯಾ ವಾಹಿನಿ ಹರಿಯಿತ್ತೈ ಹೃದನ ಪೈಲೆಟ್ಟೈ ಪೆನ್ನಿಂದ ಧಾರೆ ಧಾರೆ ಮಸಿ ಮೂಡಿತ್ತೈ ಬಿಳಿಯ ಹಾಳೆಯಲಿ ಸಾಲು ಸಾಲು. ಒಂದಲ್ಲ ಎರಡಲ್ಲ ಮೂರಲ್ಲ—ನೂರಾರು ಸಾಲುಗಳು ಉರುಳಾಡಿ ಹೊರಳಿದವವನ ಕೈಯ್ಯ ಕೃಪೆಯಲ್ಲಿ. ಶಾರದೆಯ ಕೃಪೆ ಗಣಪನ ದಯೆ—ವರಕವಿ—ನರಕವಿ—ಬೆಳೆದ ಕ್ರಾಪು—ಹಾಕಿದ ಜುಬ್ಬ—ಡೀಲು ಪೈ ಜಾಮ—ಕೈಯಲಿ ಕಂತೆ ಕಡತ—ಹಿಡಿದನ್ನೈ ಏನು ಸಾಹಿತ್ಯ ರಾಶಿಯದು! "ತ್ರಿಭುವನ ನಗರಿ" "ಕೊಯ್ದ ಕರುಳು" "ಹಿಡಿದ ಕುಡುಗೋಲು" ತಾಂಡವಾಡಿತು ಈ ಕಾದಂಬರಿಗಳ—ಕೋಲಾರದ ಕೂಳ ಕೂಗು—ರಾಯಲಶೀಮೆಯ ಎಲುಬ ಹಂದರದ ಪಶುಗಳ ಹಸಿವಿನ ಆರ್ತನಾದ—ಇವನೆಲ್ಲ ಪ್ರಕಟಿಸಿ ಜನುಮ ಸಾರ್ಥಕಮಾಡಬೇಕೆಂದು ಹೊರಟನ್ನೈ ಸಾಂಬಶಿವ ಪುಸ್ತಕ ಪ್ರಕಟನಕಾರನ ಬಳಿಗೆ....ಠೀವಿಯಿಂದ.

— ೨ —

'ಆಗ ಬಾ—ಈಗ ಬಾ' ಎಂದೆಂಬ ಪ್ರಕಾಶಕರ ನಕಾರದಿಂದ ಬೇಸತ್ತ ನೀ ಸಾಂಬಶಿವ. "ತ್ರಿಭುವನ ನಗರಿ" ಏನು ಹೆಸರಿದು—ಅರ್ಥವಿಲ್ಲದ್ದೆ "ಹಾಕಿದಹಾರ" "ಹಾರಿಬಂದ ಮಾರಿ" ಎಂದಿಟ್ಟರೆ ಮಾರಲು ಸುಲಭ ಎಂದ ಅವ. ಹೆಸರಲ್ಲಿ ಏನಿಹುದು ಹಾಗೇ ಆಗಲಿ 'ಹೂಂ' ಎಂದ ಕವಿರಾಯ ಗಹಗಹಿಸಿ ನಕ್ಕು "ಹೆಸರಲ್ಲಿ ಏನಿಲ್ಲವೆಂಬುದೇ ಈ ಕಥೆ ಎನ್ನ ಮಡದಿ ಬರೆದುದೆಂದು ಅಚ್ಚುಹಾಕಿಸಲೇನಯ್ಯಾ!" ಎಂದನ್ನಬಹುದೇ ಆ ಕಡುಪಾಪಿ ಪುಸ್ತಕ ಪ್ರಕಟನಕಾರೀ—ಕವಿರಾಯನ ಕರುಳು ಕೊಯ್ದಿತ್ತು ಅವ ಹಿಡಿದ ಕುಡುಗೋಲಿಂದ—ಹೊರಬಿದ್ದ ಪೆಚ್ಚು ಮೋರೆಯಹಾಕಿ—ಬರೆಯಲಾಲೋಚಿಸಿದ—'ಭುಕ್ತಿ ಮಾರ್ಗಕ್ಕೇನು?" ಎಂಬ ಕಥೆ ಸಾಂಬಶಿವರಾಯ ಘೋರಾರಣ್ಯದೊಳು ಶಿವ ಶಿವಾ ಎಂಬಂತಾಯ್ತು. "ಸರಸ್ವತಿಯು ಒಲಿದವಗೆ ಲಕುಮಿಯು ಲಕ್ಕು ತೋರಿಸಳಯ್ಯ!....ಮುಂದೇನು ಮುಂದೇನು?—ಹಾ! ಬಿದಿಯೆ—ಎನ್ನಗತಿ ಬೀದಿಪಾಲಾಯ್ತೆ—ಕೋಗಿಲೆಯ ಇಂಚರವು ಕರ್ಕಶವಾಗಿರ್ಪುದು ಬೆಳದಿಂಗಳಲಿ ಸುಗಂಧರಾಜನ ಮೂಸೆ ಮೀಸೆಗೆ ಹೆಜ್ಜೇನು ಕುಟುಕಿದಂತಾಯ್ತು ಶಿವ" ಗತಿಯೇನು ದಿಕ್ಕಾರು ನಂಬಿಕೆಟ್ಟೆನೇ ಈ ಸಾಹಿತ್ಯವನ್ನಾ....

— ೩ —

"ಅವಳ ಸೆರಗು" "ಹಾಕಿದ ಹಾರ" "ನಾರಿಯ ನೋಟ" "ತಿದ್ದಿದ ಮುಂಗುರುಳು" "ಉಬ್ಬಿದ ಎದೆ" "ಗೀರು ಹುಬ್ಬು" "ನಿತಂಬಿನಿ"....ಮುಂತಾದ ಗ್ರಂಥ ರಾಶಿಯ ಹೊರ ಹೊಮ್ಮಿಸಿದ ಸಾಂಬಶಿವ ಮೊದಲ ಮುದ್ರಣ....ವೆಲ್ಲ ಬಿಸಿಯ ದೋಸೆ ಯಂತಾಯ್ತು–ಜನ ಜುಂಗುಳಿ ಕ್ಯೂ ನಿಂತು ಕೊಂಡರು–ಹುಬ್ಬು ಹಾರಿಸಿದ ಸಾಂಬಶಿವ ಕರಿಯ ಷೇರುವಾನಿಯ ಧರಿಸಿ ಮಧ್ಯ ಬೈತಿಲೆತೆಗೆದು ಗರಿಗರಿಯ ಸುರುವಾಲು ಗಿರ್ಕಿ ಚಡಾವು ಬಾಯಲಿ ಪೈಪು ಧರಿಸಿ ಠೀಕಾಗಿ ಮೆರೆದನವ–ಏನೆಂದು ಬರೆದಾನು ಅಂಥವೇ ಕಥೆಗಳನು? ಬರೆದಿದ್ದೆ ಬರೆಯೋ ಬೋರನಂತಾದ ಅದೇ ಕಥೆಗಳನು. ಹೆಸರು ಬದಲಿಸಿ ಹೊರಗೆಡವ ತೊಡಗಿದ. ದಾಹ ಹೆಚ್ಚಾಯ್ತು ಅವಗೆ–ಹಿಂದೊಮ್ಮೆ ತಾ ಬರೆದ ಪುಸ್ತಕವ ಮೂಸುವದಿಲ್ಲವೆಂದು ಕೊರಗುತಿದ್ದ ಈ ಸಾಂಬಶಿವ ಬರೆಯ ತಿದ್ದಂತೆ ಮುತ್ತ ತೊಡಗುವರು ಪುಸ್ತಕ ಹೊರತರುವ ಅಣ್ಣಗಳು.

— ೪ —

'ಕಾಮ ಬಲಿ' ಎಂಬ ಮಾಸಿಕವ ಹೊರತರಲು ಸಾಂಬಶಿವ ಕಂಡುದ್ದ ರಾಶಿ ರಾಶಿ ಸವರನ್ನು ರಾಶಿ. ಮನೆಯಕೊಳ್ಳಲು ಹವಣಿ ಸಿಹ–ಇದೇ ಬುದ್ಧಿ ಮೊದಲಿಲ್ಲದೆ ಹೋಯ್ತೆ ?....ಎಂದು ವೃಥವಾಗಿ ವ್ಯರ್ಥವಾದ ವೇಳೆಗಾಗಿ ಹಂಬಲಿಸುವ.

— ೫ —

ವ್ಯಾಪಾರ ಜೋರಾಯ್ತು ಮಾಸಿಕಕಿಂತ ಈಗ ವಿದೇಶವ ಮಾಲು ತರಿಸುವ, ಮಾರುವ ದಾಂಧಲೆಯ ಹಚ್ಚಿಹನು. ದೊಡ್ಡ ಕಾರುಬಾರವವನದು–ದೊಡ್ಡ ಆಫೀಸಿಹುದು ಬಹುಮಂದಿ ನೌಕರರು ಪ್ರತಿನಿತ್ಯ ದೇಶ ದೇಶದ ಮೂಲೆ ಮೂಲೆ ಕಳಿಸುವರು ಪಾರ್ಸಲ್ಲು....ಬೇಡ ಬೇಡೆಂದರೂ ಧನಲಕ್ಷ್ಮಿ ಸುರಿಯುವಳು ದಿನ ದಿನವು ಸಾಂಬಶಿವನ ತ್ರಿಜೋರಿಯಲಿ ನೋಟಿನ ಕಟ್ಟು ಕಟ್ಟಾಗಿ....ಬಹುದಿನವೆನಗೆ ಇವನ ವ್ಯವಹಾರದ ಮರ್ಮವೇ ತಿಳಿದಿರಲಿಲ್ಲ, ಮೊನ್ನೆ ತಿಳಿಯಿತು....ಇದರಲ್ಲಿ ಬಹುಲಾಭ ಉಂಟೆಂದು. ಫ್ರಾನ್ಸಿನಿಂದಲಿ ತರಿಸುವವನು ಚಿತ್ರಗಳ....ಶಯನ ಗೃಹದ....ಗ್ನ ಚಿತ್ರಗಳ ವ್ಯಾಪಾರಿ ಸಾಂಬಶಿವರಾಯ.

— ೬ —

ಗುಟ್ಟಾಗಿ ಸಲಹೆಯನಿತ್ತನಂತೆ ಓರ್ವಗೆಳೆಯ ಅವನಿಗೆ...."ಹೇರಳ ಹಣಗಳಿಸಲು ಮತ್ತೊಂದು ಮಾರ್ಗವಿದೆ....ಈ ಚಿತ್ರಗಳ ಸುಡು....ಅದಕಿಂತ ಹುಡಿಕಿಕೊಡು ಜೀವಂತ ವ್ಯಾಪಾರ ಮಾಡು.

ಹಾಗೇ ಮಾಡಲು ಬಲ್ಲಕವಿ ಸಾಂಬಶಿವರಾಯ. ಕಂಡವರಾರು ಈ ಸಾಹಿಯ ಸೌಭಾಗ್ಯ ? ? ?

—ಯಜ್ಞ ಪಶು.

ಆಡಳಿತ

"ನಮಸ್ಕಾರ! ನಾನೇ ಪಾರ್ಲಿಮೆಂಟರಿ ಸೆಕ್ರೆಟರಿಯ ಆಪ್ತ ಕಾರ್ಯದರ್ಶಿ"

"ಓಹೋ! ಪಾರ್ಲಿಮೆಂಟರಿ ಪ್ರೈವೆಟ್ ಸೆಕ್ರೆಟರಿ ಅಂತಿದಾರಲ್ಲಾ, ಅವರಲ್ಲವೋ ತಾವು?"

"ಅಲ್ಲ, ಅಲ್ಲ, ನಾನು ಬರೀ ಪ್ರೈವೆಟ್ ಸೆಕ್ರೆಟರಿ"

"ಯಾರಿಗೆ?"

"ಅದೇ ಪಾರ್ಲಿಮೆಂಟರಿ ಕಾರ್ಯದರ್ಶಿಯ...."

"ಮಿನಿಸ್ಟರಿಗೆ ಪ್ರೈವೆಟ್ ಸೆಕ್ರೆಟರಿ ಇದ್ದಾರಲ್ಲಾ, ಅವರಿಗೆ ಪ್ರತ್ಯೇಕ ಸೆಕ್ರೆಟರಿಗಳಿಲ್ಲವೊ?"

"ಇದಾರೆ, ಆದರೆ, ನಾನು ಅವರ ಪಾರ್ಲಿಮೆಂಟರಿ ಕಾರ್ಯದರ್ಶಿಯ ಆಪ್ತ ಕಾರ್ಯದರ್ಶಿ"

"ನಿಮ್ಮ ಜಂಟಿ ಕಾರ್ಯದರ್ಶಿ?"

"ಅವರು ನನ್ನ ಸಹಾಯ ಕಾರ್ಯದರ್ಶಿ ಮನೆಗೆ....ಅಲ್ಲಿ, ಒಂದು ಮದುವೆ ಇವತ್ತು"

"ನಿಮ್ಮ ಅಂಡರ್ ಸೆಕ್ರೆಟರಿ?"

"ನನ್ನ ಕೆಳಗೆ"

"ನಿಮ್ಮ ಪರ್ಸನಲ್ ಸೆಕ್ರೆಟರಿ....?"

"ಅವರನ್ನ ಇನ್ನೂ ಪಾರ್ಲಿಮೆಂಟರಿ ಸೆಕ್ರೆಟರಿಯ ಪರ್ಸನಲ್ ಸೆಕ್ರೆಟರಿಯವರು ನೇಮಿಸಿಲ್ಲ"

"ನಿಮ್ಮಂಥ ಸೆಕ್ರೆಟರಿಗೆಲ್ಲ ಸೆಕ್ರೆಟರಿಗಳಿದಾರೆ....ಆದರೆ, ಅವರಿಗೆ?"

"ಅವರಿಗೆ ಅಸಿಸ್ಟೆಂಟರು ಮಾತ್ರ....ಪರ್ಸನಲ್, ಪ್ರೈವಟ್ ಹೀಗೆ"

"ಇವರನ್ನೆಲ್ಲ ಒಬ್ಬರಿಗೊಬ್ಬರು ಆಗಾಗ ಪರಿಚಯಮಾಡಿ ಕೊಡುವವರು ಯಾರು?"

"ಅದಕ್ಕೊಬ್ಬ ಪರ್ಮನೆಂಟ್ ಸೆಕ್ರೆಟರಿಗಳಿದಾರೆ"

"ಅವರಿಗೆ ಸಂಬಳ?"

"ಯಥಾ ಪ್ರಕಾರ"

"ಮಾಮೂಲು"

"ಪರ್ಮನೆಂಟ್ ಸೆಕ್ರೆಟರಿಗಳಿಗೆ ಯಾರೂ ಸಹಾಯ ಮಾಡುವವರಿಲ್ಲವೆ?"

"ಇಲ್ಲದೆ ಉಂಟೆ?....ಓ! ಇಕೊ! ಇವರೇ, ಪಾರ್ಲಿಮೆಂಟ್ ಸೆಕ್ರೆಟರಿಗಳ ಪಾರ್ಲಿಮೆಂಟರಿ ಪ್ರೈವಟ್ ಸೆಕ್ರೆಟರಿಗಳ ಜಂಟಿ ಸೆಕ್ರೆಟರಿಯ ಪರ್ಸನಲ್ ಪ್ರೈವಟ್ ಸೆಕ್ರೆಟರಿ...."

"ನಮಸ್ತೆ"

"ನಮಸ್ತೆ"

ಕ್ರಿಕೆಟ್ ವಿಚಾರವಾಗಿ ಕೆಲವು ಸಲಹೆಗಳು

ಭಾರತಕ್ಕೂ ಇಂಗ್ಲೆಂಡಿಗೂ ನಾಲ್ಕು ಟೆಸ್ಟ್ ಕ್ರಿಕೆಟ್ ಪಂದ್ಯಗಳಾದುವು. ಭಾರತದ ಟೀಮು ಸೋಲಿನಿಂದ ಸೋಲಿಗೆ ಜಯಪ್ರದವಾಗಿ ಮುಂದುವರಿಯಿತು. ಕರುಳಿನ ಸಂಕಟ ತಡೆಯಲಾರದ ಕ್ರಿಕೆಟ್ ಅಭಿಮಾನಿಗಳು ಚುನಾವಣಾ ಸಮಿತಿ (Selection Board)ಗೆ ಬರೆದ ಪತ್ರಗಳಲ್ಲಿ ಕೆಲವು ನಮಗೆ ತಲುಪಿವೆ. ಕಾಲ ಮಿಂಚಿ ಹೋಗಿದ್ದರೂ ಅವನ್ನು ಇಲ್ಲಿ ಪ್ರಕಟಿಸಿದ್ದೇವೆ—ಮುಂದೆ ಹೀಗಾಗದಿರಲಿ ಎಂಬ ಸದುದ್ದೇಶದಿಂದ.

ಬೆ. ಚಂ.

೧. ಸ್ವಾಮಿ—ಇನ್ನುಮುಂದೆ ನಮ್ಮ ದೇಶವನ್ನು ಪ್ರತಿನಿಧಿಸುವ ಕ್ರಿಕೆಟ್ ಟೀಮನ್ನು ಯಾವ ರೀತಿ ಚುನಾಯಿಸಬೇಕೆಂಬ ನನ್ನ ಈ ಸಲಹೆ ಅತಿ ಕ್ರಾಂತಿಕಾರಕವೆಂದು ಕಾಣಬಹುದು. ಆದರೆ ಈ ಕಾಲದಲ್ಲಿ ಸತ್ಯಾಂಶವನ್ನು ಮುಚ್ಚಿಡುವುದು ಹಾನಿಕರ. ಒಂದೇ ಮಾತಿನಲ್ಲಿ ಹೇಳುವುದಾದರೆ, ಕಿರಿಯರನ್ನು ಆರಿಸಿ ಕಳುಹಿಸುವುದೊಂದೇ ಮಾರ್ಗ.

ಇತಿ, ತಮ್ಮ ವಿಧೇಯ, "ಚಕ್ರಧ್ವಜ."

೨. ಸ್ವಾಮಿ—ನಾನೇನೂ ಕ್ರಿಕೆಟ್ ಪ್ರವೀಣನಲ್ಲ, ಆದರೆ ಈ "ಪ್ರತಿನಿಧಿ ಪಕ್ಷ, representative side, ಹೇಗಿರಬೇಕು" ಎಂಬ ಪ್ರಶ್ನೆಯನ್ನು ನಿಷ್ಕಾಪಟ್ಯದಿಂದಲೂ ಜಾಣತನದಲ್ಲೂ ಪರಿಹರಿಸಬೇಕೆಂದು ಹೇಳ ಬಯಸುತ್ತೇನೆ. ನಾನು ಯಾವಾಗಲೂ ಬಿಡುವಿಲ್ಲದೆ ಕಾರ್ಯತತ್ಪರನಾಗಿರಬೇಕಾಗಿದ್ದುದರಿಂದ ಇದುವರೆಗೂ ಯಾವ ಟೆಸ್ಟ್ ಪಂದ್ಯವನ್ನೂ ನೋಡಲಾಗಿಲ್ಲ. ಆದರೆ ನಮ್ಮ ಆಟಗಾರರ ಫೋಟೋಗಳನ್ನೂ ಆಂಗ್ಲರ ಫೋಟೋಗಳನ್ನೂ ನೋಡಿದಾಗ ಇಬ್ಬರಿಗೂ ಇರುವ ವ್ಯತ್ಯಾಸ ಕಂಡಿತು. ಕುದುರೆ ರೇಸಿನಲ್ಲೂ ಕುಸ್ತಿಯಲ್ಲೂ ಇರುವಂತೆ ಎರಡು ಪಕ್ಷಗಳಿಗೂ ಸಮಾನತೆ ಆರಂಭದಿಂದಲೇ ಇರಬೇಕೆಂಬುದು ಪ್ರತಿಯೊಬ್ಬ ನ್ಯಾಯಪರನೂ ಒಪ್ಪಬೇಕಾದ ವಿಚಾರ. ಬೆಡ್ಸರಿನಂತಹ ಸೈಂಧವ ಭಾರತದ ಟೀಮಿನಲ್ಲಿ ಏಕೆ ಒಬ್ಬನೂ ಇಲ್ಲ? ದಿವೇಚ ಅಷ್ಟುಸ್ಥೂಲವಾಗಿರಬಹುದು, ಆದರೆ ಅಷ್ಟು ಎತ್ತರವಿಲ್ಲ. ಒಂದು ಪಕ್ಷದ ಆಟಗಾರರ ಒಟ್ಟು ತೂಕ ಇನ್ನೊಂದರಷ್ಟೇ ಇರಬೇಕಾದ್ದು ನ್ಯಾಯವಲ್ಲವೆ? ಆದ್ದರಿಂದ ನಾನು ಒತ್ತಿ ಹೇಳುವುದೇನೆಂದರೆ, ಮುಂದಿನ ಟೆಸ್ಟ್ ಪಂದ್ಯಗಳಿಗೆ ನಮ್ಮ

ವರು ಆಂಗ್ಲರ ಪಕ್ಷದಷ್ಟೆ ನಿಕರವಾದ ತೂಕವುಳ್ಳ ಪಕ್ಷವನ್ನು ಆರಿಸಲಿ. ಬೆಡ್ಸರನಷ್ಟು ತೂಕವುಳ್ಳವನು ನಮ್ಮಲ್ಲಿ ಯಾರೂ ಇಲ್ಲದುದರಿಂದ ಇನ್ನೊಂದಿಬ್ಬರನ್ನು ನಾವು ಸೇರಿಸಿಕೊಳ್ಳುವುದು ಸಹಜವೇ ಆಗಿದೆ.

ಇತಿ, ತಮ್ಮ...." ಓರ್ವ ವ್ಯವಹಾರಜ್ಞಾನಿ."

೩. ಸ್ವಾಮಿ—ಚುನಾವಣಾ ಸಮಿತಿಯವರು ಮರ್ಚೆಂಟ್ ಮತ್ತು ಅಮರನಾಥರನ್ನು ತ್ಯಜಿಸುವಷ್ಟು ಮೂರ್ಖರಾದರೆ ಮತ್ತಿನ್ನೇನಾಗಬಹುದೆಂದು ತಿಳಿದಿದ್ದೀರಿ?

ಇತಿ, ತಮ್ಮ " ವಿಕಟರ್. "

೪. ಸ್ವಾಮಿ—ನಾನು ಯಾವೊತ್ತೂ ಕ್ರಿಕೆಟ್ ಬ್ಯಾಟು ಹಿಡಿದವನಲ್ಲ, ಚೆಂಡು ಎಸೆದವನಲ್ಲ, ಪೆವಿಲಿಯನ್ನಿನಲ್ಲಿ ಕಾಲು ಚಾಚಿ ಕುಳಿತು ಆಟ ನೋಡಿದವನಲ್ಲ. ಆದರೂ ಕ್ರಿಕೆಟ್ ಎಂದರೆ ನನಗೆ ಜನ್ಮಾರಭ್ಯ ಒಂದು ವಿಧವಾದ ನಿಷ್ಕಾಮ ಪ್ರೇಮ. ಆದ್ದರಿಂದ ಟೆಸ್ಟ್ ಪಕ್ಷವನ್ನು ಆರಿಸುವ ಈ ಜಟಿಲ ಪ್ರಶ್ನೆಯ ಇತ್ಯರ್ಥಕ್ಕೆ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗಿಲ್ಲದ, ನಿಷ್ಪಕ್ಷಪಾತನಾದ ನಾನು ಸಮರ್ಥನೆಂದು ತಿಳಿದಿದ್ದೇನೆ. ಮೊನ್ನೆ ಮರ್ಸಿನದೀ ತೀರದಲ್ಲಾದ ಪತನದ ತರುವಾಯ ನಮ್ಮ ಬ್ಯಾಟಿಂಗ್ ಉತ್ತಮವಾಗಬೇಕಾದರೆ ತೀವ್ರವಾದ, ಉಗ್ರವಾದ ಬದಲಾವಣೆ ಆಗಬೇಕಾಗಿದೆ. ಈಗ ಪ್ರವಾಸಮಾಡುತ್ತಿರುವ ಟೀಮನ್ನು ಒಬ್ಬೊಬ್ಬರನ್ನಾಗಿ ಪರೀಕ್ಷಿಸೋಣ. [ಈ ಕೆಲಸ ಈಗಾಗಲೆ ಬೇಕಾದಹಾಗೆ ಆಗಿರುವುದರಿಂದ, ಮುಂದೆ ಹೋಗೋಣ.—ಸಂ.] ಈ ರೀತಿ ಅವರೆಲ್ಲರೂ ಅನರ್ಹರಾದುದರಿಂದ ಬೇರೆ ಟೀಮನ್ನು ಆರಿಸೋಣ. ನಾನು ಆರಿಸುವ ಟೀಮೂ ಅದಕ್ಕೆ ಕಾರಣಗಳೂ ಈ ರೀತಿ ಇವೆ. ಒಂದು, ...[ಇಂಥ ಸಕಾರಣ ಆಯ್ಕೆಗಳೂ ಬೇಕಾದಹಾಗೆ ಆಗಿವೆ. ಮೂವತ್ತು ಸಾಲು ಮುಂದೆ ಹೋಗೋಣ—ಸಂ.] ಗಟ್ಟಿ ವಿಕೆಟ್ಟಿನಮೇಲೆ ಟೀಮು ನಮಗೆ ಮಾನ ತರುತ್ತದೆಂದು ನನಗೆ ಭರವಸೆ ಇದೆ.

ಮಳೆಬಿದ್ದು ವಿಕೆಟ್ಟು ತೇವವಾಗಿದ್ದರೆ? ಹಾ! ಆ ಸಂದರ್ಭದಲ್ಲಿ ಟೀಮನ್ನು ಸ್ವಲ್ಪ ಬದಲಾಯಿಸಬೇಕು. ಈ ಪಟ್ಟಿಯವರೇನೋ ಇರುತ್ತಾರೆ. ಇವರ ಜತೆಗೆ ಅಗತ್ಯವಾದ ಇನ್ನೊಂದು ಏಳೆಂಟು ಜನರನ್ನು ಸೇರಿಸಿದರಾಯಿತು. ಕಡೆಯ ಆಯ್ಕೆಯನ್ನು ಆಟದ ದಿನದ ಬೆಳಗ್ಗೆ ಮಾಡಬಹುದು. ಅದು ಹೇಗೆಂದರೆ....[ಇಲ್ಲಿಗೆ " ಡಿಕ್ಲೇರ್" ಮಾಡೋಣ.—ಸಂ.]

೫. ಸ್ವಾಮಿ—ನಾನು ವೈದ್ಯ ವೃತ್ತಿಯನ್ನವಲಂಬಿಸಿದ್ದರೂ ಕ್ರಿಕೆಟ್ ಆಟದ ಗಂಧವಿಲ್ಲದವನಲ್ಲ. (ನಮ್ಮ ಆಸ್ಪತ್ರೆಯ ಅಂತರವಾರ್ಡು ಪಂದ್ಯಗಳಲ್ಲಿ ಅಂಪೈರ್ ಆಗಿ ನನ್ನ ಅದ್ವಿತೀಯ ತೀರ್ಪುಗಳಿಂದ ಎಲ್ಲರನ್ನೂ ಹಸನ್ಮುಖಿಗಳನ್ನಾಗಿ ಮಾಡಿದ್ದೇನೆ.) ಭಾರತದ ಟೀಮು ಹೇಗಿರಬೇಕೆಂದು ಈಗ ಸಾರ್ವಜನಿಕರಲ್ಲಿ ನಡೆಯುತ್ತಿ

ರುವ ಚರ್ಚಿಗೆ ನನ್ನ ಅಳಿಲು ಸೇವೆ ಸಲ್ಲಿಸಬೇಕೆಂದಿದ್ದೇನೆ. ಆಟದ ಮೈದಾನದಲ್ಲಿ ನಮ್ಮವರು ಹಲವುಸಲ ಪೆಟ್ಟುತಿಂದರೆಂದು ತಿಳಿದಮೇಲೆ ಜಡ್ಡು ಚರ್ಮದ ಆಟಗಾರರನ್ನೂ ಆರಿಸುವುದು ಕ್ಷೇಮವಲ್ಲವೆ? ಟ್ರೂಮನ್ ಎಸೆದ ಚಂಡಿನ ರಭಸಕ್ಕೆ ಹೆದರಿ ನಮ್ಮವರು ಔಟಾದರಂತೆ! ಅಂಥ ರಭಸದ ಚಂಡಿಗೆ ತಲೆಗೊಟ್ಟು ಬೌಂಡರಿಗೆ ಕಳುಹಿಸುವ "ಶಿರಸ್ತ್ರಾಣ" ವುಳ್ಳವರು, ಹಣಾಹಣಿ ಯುದ್ಧಗಳಾಗುತ್ತಿದ್ದ ನಮ್ಮ ಭಾರತದಲ್ಲಿಲ್ಲವೆ?


ಇತಿ, ತಮ್ಮ...."ವೈದ್ಯ ನಾರಾಯಣ."

೬. ಪ್ರಿಯ ಸಹೋದರರೆ-ಭಾರತದ ಅತ್ಯುತ್ಕೃಷ್ಟವಾದ ಪುರುಷಪಕ್ಷ ಕ್ರಿಕೆಟ್ಟಿನಲ್ಲಿ ಅಂಜಿ ಪರಕೀಯರಿಗೆ ಸೋತು, ಒಂದು ಚೂರು ರಬ್ಬರ್ ತರಲಾರದ ಮೇಲೆ, ಸ್ತ್ರೀ ಪಕ್ಷವೊಂದನ್ನು ಇಂಗ್ಲೆಂಡಿಗೆ ಕಳುಹಿಸುವುದು ಈ ಸಮಾನತೆಯ ಯುಗದಲ್ಲಿ ಯುಕ್ತವಲ್ಲವೆ?

ಇತಿ, ತಮ್ಮ...." ನ್ಯಾಯಪರಾಯಣೆ "

೭. ಸ್ವಾಮಿ—ದೀರ್ಘಕಾಯನೂ ಸ್ಥೂಲದೇಹಿಯೂ ಆದ ಕ್ರಿಕೆಟ್ ಆಟಗಾರನೊಬ್ಬನನ್ನು ಮದರಾಸಿನಲ್ಲಿ ಕೆಲವು ವರ್ಷಗಳ ಹಿಂದೆ ನೋಡಿದ್ದು ಜ್ಞಾಪಕವಿದೆ. ಆತನ ಹೆಸರು ತಕ್ಷಣ ನೆನಪಿಗೆ ಬರಲೊಲ್ಲದು. ಅನೇಕ ಗಂಟೆಗಳಹೊತ್ತು ಬೌಲ್ ಮಾಡಿ ತನ್ನ ಪಕ್ಷಕ್ಕೆ ಹೇಗೆ ಮಾರ್ಗ ದರ್ಶಕನಾದನೆಂದರೆ, ಎದುರಾಳಿಗಳು ಅತ್ಯಲ್ಪ ಕಾಲದಲ್ಲೆ ಸೋತುಹೋಗುವಹಾಗಿತ್ತು. ಈಗ ನನಗೆ ಮರವುಜಾಸ್ತಿ, ಇಲ್ಲದಿದ್ದರೆ ಆತನ ಹೆಸರನ್ನು ಹೇಳಿಬಿಡುತ್ತಿದ್ದೆ. ಬಹುಷಃ ಸಮರಸಿಂಗ್ ಎಂದು ಇರಬಹುದು. ಆತ ಈಗ ನಮ್ಮ ಟೀಮಿನಲ್ಲಿದ್ದಿದ್ದರೆ ನಮ್ಮ ಸ್ಥಿತಿ ಉತ್ತಮವಾಗುತ್ತಿತ್ತು.

ಇತಿ ತಮ್ಮ...."ಷಷ್ಟ್ಯಬ್ಧಿಪೂರ್ತಿ."




—ರಾತ್ರಿಯೆಲ್ಲಾ ಏನು ತಿಗಣೆ ಕಾಟವಯ್ಯಾ, ನಿಮ್ಮ ಹಾಳು ಜೈಲಿನಲ್ಲಿ. ?

ನಿಜ ಭಕ್ತ

" ಜನರೆಷ್ಟು ಮನೆಯಲ್ಲಿ ? "—ಎಂದು ಕೇಳಿದರವನು ಆರೆಂದ ಒಮ್ಮೆ; ಹದಿನಾರೆಂದ ಮತ್ತೊಮ್ಮೆ—ಅದ ಕೇಳಿ ರೇಶನಧಿಕಾರಿ ಬಲು ರಂಪವೆಬ್ಬಿಸಿ ನಡೆಯೆ, ಈ ಭೂಪ ಜಗದೆಲ್ಲ ಅಂಕೆಗಳ, ಜಗದೆಲ್ಲ ಸಂಖ್ಯೆಗಳ, ಸುರುಸುರುವಿ ಲೇಖನವ ಬರೆದನಯ್ಯ ವೆಚ್ಚ ಮಿತಿ ಮೀರಿರಲು, ಸಾಲ ದೊರೆಯದೆ ಇರಲು, ತಾನೆರವಲು ತಂದ ಹಾಳೆಗಳ ತುಂಬ ಮಿತವ್ಯಯದ ಮಹತ್ವವನು ಸಾರಿದನಯ್ಯ ! ವಿದ್ಯುತ್ ಫ್ಯೂಸು ಕೆಟ್ಟಿರಲು, ಅದನು ಸರಿಗೊಳಿಪ ಆಳು ಬರುವತನಕ, ಅಜ್ಞಜನಗಳಿಗಾಗಿ ವಿಜ್ಞಾನದದ್ಭುತಿವ ಬುಡ್ಡಿಯಾ ಬೆಳಕಿನಲೆ ಬಣ್ಣಿಸುವನಯ್ಯ ! ಬಾಳ್ವಪರಿಯೊಂದು ಮೇಣ್ ಬರೆಹದಲ್ಲಿನ್ನೊಂದು; ಅರಿತವರೆಲ್ಲ ಇದ ಕಂಡು ನಗುವ ಸೊಗವಿನ್ನೊಂದು ! " ನಗುವ ನರಳಿಪನಿವನು—ಇವನೆನ್ನ ನಿಜಭಕ್ತ "—ಎಂದೆನುತ ತಲೆದೂಗುತಿಹಳಯ್ಯ ನಗುವಿನಪರಂಜಿ ಈ ದೇವಿ ಕೊರವಂಜಿ !

—ರಾಮಕೃಷ್ಣ



ಹುಡುಗ :—ಮೂರುಕಾಸಿಗೆ ಹಣ್ಣು ಕೊಡಿ.

ಅಂಗಡಿಯವ :—ಒಂದು ಗಾಡಿ ತೊಗೊಂಡುಬಾಪ್ಪಾ ತುಂಬಿಕೊಂಡು ಹೋಗುವಿಯಂತೆ.

ಅನ್ನ ಬ್ರಹ್ಮ

ತಿನ್ನುವುದಕ್ಕಾಗಿ ಬದುಕಬಾರದು; ಬದುಕುವ ಸಲುವಾಗಿ, ತಿನ್ನಬೇಕು. ನನ್ನ ಪರಿಚಿತರ ಪೈಕಿ ನೂರಕ್ಕೆ ತೊಂಬತ್ತೊಂಬತ್ತು ಮಂದಿ ತಿನ್ನುವುದು ಹೆಚ್ಚು; ತಿನ್ನುವ ಕಾಲಗಳಿಗೂ ಹೆಚ್ಚು ಅಂತರವಿಲ್ಲ; ತಿನ್ನುವುದೂ ಬಹು ಬೇಗ; ಬಹಳ ಹೊತ್ತು ತಿನ್ನುತ್ತಾರೆ; ತಿನ್ನುವಾಗಿನ ಸದ್ದು ವಿಪರೀತ. ಇದನ್ನೆಲ್ಲ ಅವರು ತಿದ್ದಿಕೊಳ್ಳಬೇಕು. ತಿದ್ದದೆ ತಿಂದರೆ, ಮೈಗೆ ಅಪಾಯ. ಅಲ್ಲದೆ, ಅವರನ್ನು ಮತ್ತೊಂದು ವಿಚಾರದಲ್ಲೂ ಟೀಕಿಸದೆ ವಿಧಿಇಲ್ಲ. ಅನುಕೂಲವಲ್ಲದ, ಪ್ರಯೋಜನವಿಲ್ಲದ, ಆಹಾರ ಪದಾರ್ಥಗಳನ್ನು ಅವರು ತಿನ್ನುತ್ತಿದಾರೆ. ಇದರಿಂದ, ಅವರ ದೇಹರಚನೆಯಲ್ಲಿ ಮಾತ್ರವೇ ಅಲ್ಲ, ಮನೋ ಬುದ್ಧಿಗಳಲ್ಲೂ ಭಯಂಕರ ಮಾರ್ಪಾಟುಗಳಾಗುತ್ತಿವೆ. ಈ ಅನಾಹುತವನ್ನು ಅವರು ಎಷ್ಟುಬೇಗ ಮನಗಾಣುತ್ತಾರೋ, ಅಷ್ಟು ಬೇಗ ಅವರ ಹೆಂಡತಿ ಮಕ್ಕಳಿಗೆ ಕ್ಷೇಮ ಏಕೆಂದರೆ, ಅನ್ನಮಯ ಕೋಶಕ್ಕೂ ಮನೋಮಯ ಕೋಶಕ್ಕೂ ತೀರ ನಿಕಟ ಸಂಬಂಧ ಇದೆ. "ಅನ್ನಾದ್‌ಭವತಿ ಕನ್ನಾಣಿ" ಎಂದು ಆರ್ಯಮಹರ್ಷಿಗಳು ಘೋಷಿಸಿದಾರೆ. ತಿನ್ನುವ ಅನ್ನದ ಗುಣದಿಂದಲೇ ಕನ್ನಿಗ ಕನ್ನ ಮಾಡುವುದು, ಎಂಬುದೇ ಅದರ ಅರ್ಥ.

ಮನುಷ್ಯನೂ ಒಬ್ಬ ತಿರ್ಯಾಗ್ ಜಂತು, ಮೂಕಪ್ರಾಣಿಗಳಂತೆ ಪುರುಷರೂ ನಾಲಗೆಯನ್ನುಡುಗಿಸಿ ಕೂರುತ್ತಾರೆ. ಗಿಡಗನಂತೆ ಅವನೂ ಆಕಾಶದಲ್ಲಿ ಹಾರಾಡಿ, ಕೆಳಗಿರುವ ಕೋಳಿಮರಿಗಳನ್ನು ಹಾರಿಸುತ್ತಾನೆ. ಮೊಸಳೆಯಂತೆ ನೀರೊಳಗೆ ಮುಳುಗಿದ್ದು, ಕರೀಂದ್ರ ಗಜೇಂದ್ರರ ಕಾಲು ಕಚ್ಚುತ್ತಾನೆ, ಕುರಿಯಂತೆ ಅವನೂ ಬ್ಯಾ ಎನ್ನುತ್ತಾನೆ; ಹೆದರಿ ಓಡುತ್ತಾನೆ; ತೋಳನಂತೆ ಹಳ್ಳಕ್ಕೆ ಬೀಳುತ್ತಾನೆ; ಉಷ್ಟ್ರಪಕ್ಷಿಯಂತೆ ಕಲ್ಲನ್ನೂ ನುಂಗುತ್ತಾನೆ; ಒಂಟೆಯಂತೆ ಹಾರಕ್ಕೆ ಕತ್ತು ನೀಡುತ್ತಾನೆ; ಎಮ್ಮೆಯಂತೆ ಕೆಸರಿನಲ್ಲಿ ಬಿದ್ದೊದ್ದಾಡುತ್ತಾನೆ; ಎತ್ತಿನಂತೆ ನೊಗ ಹೊರುತ್ತಾನೆ. ಆದ್ದರಿಂದ, ಅವನಿಗೆ ಎಂಥ ಆಹಾರ ಸಮರ್ಪಕವೆಂದರೆ, ಈ ಪ್ರಾಣಿಗಳು ಸಹಜವಾಗಿ ತಿಂಬ ಪದಾರ್ಥಗಳು ಮಾತ್ರ; ನೋ ಇತರಾಣಿ; ಮಿಕ್ಕವೆಲ್ಲ ವರ್ಜ್ಯ; ಅಸಹ್ಯ; ಅಧರ್ಮ; ಶಾಸ್ತ್ರ ವಿರುದ್ಧ. ಕೇಸರಿಗಳನ್ನು ಬಾತ್‌ಮಾಡಿ ತಿಂಬುವ ಪದ್ಧತಿ ಕೆಟ್ಟದು. ಷಾಜಹಾನ್ ಮುಂತಾದ ಚಕ್ರವರ್ತಿಗಳನ್ನೂ ಪ್ಲೇಟಲ್ಲಿಟ್ಟು ಮುಂದಿರಿಸಿಕೊಳ್ಳಕೂಡದು, ಹಯಗ್ರೀವವನ್ನು ಹಯವೇ ತಿನ್ನುವುದಿಲ್ಲ ವೆಂದಮೇಲೆ,

ನರಮನುಷ್ಯ ಅನುಭೋಗಿಸಬಹುದೆ? ಹೆಂಡವನ್ನು ಕುಡಿಯದೆ ಸಿಂಹ ವನರಾಜ ಎನಿಸಿಕೊಂಡಿಲ್ಲವೆ? ಆದ್ದರಿಂದ, ವೈದ್ಯರ ಸರ್ಟಿಫಿಕೆಟಿಲ್ಲದೆ ಮದ್ಯಪಾನ ಮಾಡ ಕೂಡದು.

ಮುಖ್ಯವಾಗಿ, ಪಾಕಮಾಡಿದ ಪದಾರ್ಥಗಳನ್ನು ತೆಗೆದುಕೊಳ್ಳದಿರುವುದೇ ಮೇಲು. ದ್ರಾಕ್ಷಾಪಾಕ? ಕೂಡದು. ನಾಳಿಕೇಳಪಾಕ? ಅದೂ ಒಂದು ತರಹ ಹೆಂಡವೆ. ನಳಪಾಕ? ರುಚಿಗೆಡಿಸುವುದರಲ್ಲಿ ನಿಸ್ಸೀಮ ಆನಳ. ಅವನು ಅಷ್ಟು ಚೆನ್ನಾಗಿ ಅಡಿಗೆ ಬಲ್ಲವನಾಗಿದ್ದರೆ, ದಮಯಂತಿ ಅವನನ್ನು ಎಂದಿಗೂ ಮನೆಯಾಚೆ ಹೋಗಲು ಬಿಡುತ್ತಲೇ ಇರಲಿಲ್ಲ. ಕುಂಭೀಪಾಕ? ಎಲ್ಲವನ್ನೂ ತ್ಯಜಿಸಿ, ಅನ್ನಸತ್ವ, ಜೀವರಸ, ಇವು ಹೆಚ್ಚಾಗಿ ಶೇಖರವಾಗಿರುವ ಸಿಪ್ಪೆ ಸಪ್ಪೆಗಳನ್ನೇ ತಿನ್ನಬೇಕು. ಚಾಕಲೇಟ್ ತುಂಡುಗಳನ್ನು ನಾವು ಅಂಗಡಿಗಳಲ್ಲಿ ಕೊಂಡು ಕೊಳ್ಳುತ್ತೇವೆ. ಅವುಗಳಲ್ಲಿ, ಅತೀ ಬೆಲೆಯಾದ್ದೇನು? ಆ ಅಂಟನ್ನು ಸುತ್ತಿರುವ ಬಣ್ಣದಕಾಗದ. ಅಳಿಯನ ಅಹಂಕಾರ ಯಾತರಿಂದ? ಮದುವೆ ಸೂಟಿನಿಂದ. ಅದರಂತೆ, ಸಿಪ್ಪೆತೊಗಟೆ ಇವೇ ಹಣ್ಣುಗಳ ಬಹುಮುಖ್ಯಭಾಗ. ಇದನ್ನರಿತು ಆಹಾರವನ್ನು ಅಳವಡಿಸಿಕೊಳ್ಳುವವನೇ ಜಾಣ.

— o —



ಎಂತಹ ಸಂಪಾದಕರ್ರೀ ನೀವು, ಅಪರಾಧಿ ಫೋಟೋ ಹಾಕಿ, ಲಾಯರಾದ ನನ್ನ ಹೆಸರು ಅದರ ಕೆಳಗೆ ಹಾಕಿದ್ದೀರಿ?

ಸುಂದರಿ

ಸುಂದರಿ!....ಬಲ್ಲಿರ? ನಂದನ ವನದಾ ಚಂಪಕ ವೃಕ್ಷದ ತುತ್ತ ತುದಿಯಲಿ
ಚೇಡರ ಅರಸನು ಬೆಳ್ಳಿಯ ಹಾಸಿಗೆ ಮಾಡಿಸಿ ಇರಿಸಿದ, ಸುಂದರಿಗಾಗಿ.
ಅಲ್ಲಿಂದಿಳಿಯುತ ಮೆಲ್ಲಗೆ ದಿನದಿನ ಬಗೆಬಗೆ ವಿಧದಲಿ ಸುಂದರಿ ದುಡಿವಳು.
ತಾವರೆ ಹೂವಿನ ದಳಗಳ ಬಿಡಿಸಿ, ಸುಗಂಧರಾಜಿಯ ಗಲ್ಲವನೆತ್ತಿ,
ಗುಲಾಬಿ ಕೆನ್ನೆಗೆ ಬಣ್ಣವಮೆತ್ತಿ, ಮೋಡದ ತುಂಡಿಗೆ ಕರಿಮಸಿ ತಾಗಲು
ಅಲ್ಲಿಗು ಹಾರುತ ಸುಣ್ಣವ ಬಳಿದು ಬಾನನ್ನೆಲ್ಲ ಗುಡಿಸಿ ಸಾರಿಸಿ
ತಾರೆಗಳೆಲ್ಲರು ಸಂಜೆಯಹೊತ್ತಿಗೆ ಸ್ನಾನವಮಾಡಿಸಿ ತಿಲಕವನಿಟ್ಟು,
ಜಾಜಿಯ ಚಪ್ಪರ ಬಿಮ್ಮನೆಕೋಪಿಸೆ ಕಚಕುಳಿ ಇಟ್ಟದ ನಗಿಸುತ ಬೇಗನೆ
ಮಳೆಯಲಿ ಬಣ್ಣವು ಕದಡಿದ ಹೂವಿಗೆ ತುಸು ತುಸು ರಂಗನು ಸವರುತ ಮಿರುಗಿಸಿ,
ಸುಂದರಿ ನಲಿದಳು, ಎಡೆಬಿಡದೆ.
ಆದರೆ ಅಮೃತದ ಕೆನೆಯಲಿ ಕಡೆದಾ, ತೆಳ್ಳಗೆ ಬೆಳ್ಳಗೆ ಮೈಯಿನ ಸುಂದರಿ,
ಮೊನ್ನೆಯ ವಸಂತ ಮಾಸದಿ, ಪಾಪ, ತೂಕದಿ ಹೆಚ್ಚಿದಳೇನೆಂಬೆ!
ತಾವರೆ ದಳಗಳ ಬಿಡಿಸಲು ಕುಳಿತರೆ, ನೀರಲಿ ಬಿದ್ದಳು ಸುಂದರಿತೊಪ್ಪನೆ!
ಸುಗಂಧರಾಜಿಯು ಚೀರಿತು ಹೆದರಿ; ಗುಲಾಬಿ ಬಾಗಿ ಮುರಿದೇಬಿತ್ತು;
ಮೋಡದ ತುಂಡೋ, ಹರಿಹಂಚಾಯಿತು; ಜಾಜಿಯ ಹಂದರ ತಡೆಯಲೆ ಇಲ್ಲ,
ದೇವತೆ ಸುಂದರಿ ಭಾರವನು.
ದೇವರು ಅವಳನು ಕರೆದನು ಬಳಿಗೆ. "ನನ್ನವರೆಲ್ಲ ಈ ಲೋಕದಲಿ
ಗಾಳಿಗು ಹಗುರ, ಕನಸಲಿ ಕಾಣುವ ರೇಸಿಮೆಗಿಂತಲು ತೆಳ್ಳಗೆ ಅವರದು
ಮೈ ಭಾರ, ನಿನ್ನನು ಈಗಲೆ ಕಳಿಸುವೆ ಭೂಮಿಗೆ; ಬಸವನ ಗುಡಿಯಲಿ
ಬಂಗಲಿಯೊಂದಿದೆ; ಪ್ರೇಮದ ದಂಪತಿ; ಕೂಸಾಗಿರುನೀ, ಹೋಗೆ"ಂದ.
ಆಗಲಿ, ದೇವಾ, ಎಂದಳು ಸುಂದರಿ. ಬಂದಳು ಸುಂದರಿ ಶಿಶುವಾಗಿ.
ತಂದೆಗು ತಾಯಿಗು ಅತ್ಯಾನಂದ. ನೋಡೇ! ನೋಡಿರಿ! ಎನುವರು, ನಗುತ,
ಹಾಲಿನ ಬಣ್ಣ, ಹಣೆಯ ವಿಶಾಲ, ಕಣ್ಣಿನ ಹೊಳಪು, ಮೂಗಿನ ಮಾಟ,
ತುಟಿಗಳು ರಂಗು, ಕೈಕಾಲ್ ಸೊಗಸು, ವದನದ ಅದಂತ ಅಂದವೆ ಅಂದ;
ಕೂದಲೊ ಕಾಡಿಗೆ, ತೊದಲೊ ಜೇನು! ಒಂಬತ್ಪೌಂಡಿನ ತೂಕದ ಕೂಸು,
ಚಿನ್ನದ ಪುತ್ಥಳಿ, ರನ್ನದಗೊಂಬೆ, ದೇವತೆ ಇವಳು, ದೇವರೆ ಕೊಟ್ಟ,
ಎನ್ನುತ ಹಿಗ್ಗಿದರಿಬ್ಬರು ಸೇರಿ....ಸುಂದರಿ ಎಂದೇ ಹೆಸರನ್ನಿಟ್ಟರು.

—ಪಾಟೀಳಿ

ಮದವೆ ಮಾಡಿಸಿ ನೋಡಿದ:—

ಸಬ್ ಓವರ್ಸಿಯರ್ ಸೀನಪ್ಪ ಮಗಳ ಮದುವೆ ಗೊತ್ತುಮಾಡಿದಾಗ ಅವನ ಸೋದರ ಮಾವ ಶಾಮಣ್ಣ ಹೇಳಿದ "ನೋಡು ಸೀನು ಈ ಮದುವೆ ವಿಚಾರ ಇನ್ನು ಯಾವ -ಯೋಚನೆಯೂ ಇಟ್ಟುಕೋಬೇಡ. ರಂಗೋಲಿ, ಚಪ್ಪರ, ಬಾಳಿಲೆಯಿಂದ, ಬೀಗರನ್ನ ದಿಬ್ಬಣತೆರಳಿಸೋ ತನಕ ಬೇಕಾದ ಎಲ್ಲಾ ಏರ್ಪಾಡನ್ನೂ ನಾನು ಮಾಡಿಸುತ್ತೇನೆ. ನಿನ್ನ ಪಾಡಿಗೆ ನೀನು ನಿನ್ನ ಕೆಲಸ, ಸಂಪಾದನೆ ಇಷ್ಟನ್ನು ನೋಡಿಕೋ" ಅಂತ.

"ಹೌದು ಶಾಮಣ್ಣ ನೀನಿದ್ದರೆ ನನಗೆ ನಾಲ್ಕು ಭುಜ ಬಂದಹಾಗೇನೇ ನಿನ್ನ ಮೇಲೆ ಭಾರಹಾಕಿ ನಾನು ಹಾಯಾಗಿರಬಹುದು. ಆದರೂ ಮದುವೆ ಇನ್ನೂ ಎರಡು ತಿಂಗಳಿದೆ. ಲಗ್ನ ಪತ್ರಿಕೆಗೆ ನೀನು ಎಲ್ಲಾ ವ್ಯವಸ್ಥೇನೂ ಸರಿಯಾಗಿ ಮಾಡಿದರೆ ಆಗ ಮದುವೇನೂ ನೀನು ಲಕ್ಷಣವಾಗಿ ಮಾಡಿಸಬಲ್ಲೆ ಅಂತ ನಾನು ನಂಬಬಹುದು ಅದಕ್ಕೆ ಒಪ್ಪುಕೊಳ್ಳುತೀಯಾ" ಅಂದ ಸೀನಪ್ಪ.

'ಭೇಷಕ್ ಮಾಡಿಸುತ್ತೇನೆ. ಭರ್ಜರಿ ಏರ್ಪಾಡುಮಾಡುತ್ತೇನೆ" ಅಂದ ತೋಳು ತಟ್ಟಿಕೊಂಡು ಶಾಮಣ್ಣ.

ಆಗಲೇ ಸೀನಪ್ಪ ಶಾಮಣ್ಣನಿಗೆ ಎಚ್ಚರಿಕೆ ಕೊಟ್ಟಿದ್ದು. 'ಶಾಮಣ್ಣ ನಮ್ಮ ಮನೆ ಸಂಸಾರ ಆಡಳಿತ ಎಲ್ಲಾ ನಿನಗೆ ಗೊತ್ತಿದೆ. ನಮ್ಮ ಸೋದರತ್ತೆ ತಾಯಿ ಕುಳ್ಳ ಸಾತಕ್ಕನೇ ನನ್ನ ಬೆಳೆಸಿ ದೊಡ್ಡದುಮಾಡಿದೋಳು. ಅವಳು ಎಲ್ಲಾ ಏರ್ಪಾಡು ನನ್ನದು ಅಂತ ಹಠಹಿಡಿದೇ ಹಿಡಿಯುತ್ತಾಳೆ. ನನ್ನ ಹೆಂಡತಿ ಸೋದರ ಮಾವ ದೊಡ್ಡರಂಗಪ್ಪ ಇದಾನಲ್ಲಾ! ಅವನು ನಾನು ಎಲ್ಲಾ ಏರ್ಪಾಡು ಮಾಡಿಸುತ್ತೇನೆ, ಆರು ಹೆಣ್ಣುಮಕ್ಕಳ ಮದುವೆ ಮಾಡಿ ಅನುಭವ ಚೆನ್ನಾಗಿದೆ ಅಂತ ಮುಂದಕ್ಕೆ ಬರುತ್ತಾನೆ. ಇವರಿಬ್ಬರನ್ನೂ ಸಮಾಧಾನಪಡಿಸಿ ನೀನು ಏರ್ಪಾಡು ಮಾಡುವುದು ಅಂದರೆ ನನಗೇಕೋ ಕಷ್ಟ ಅಂತ ಕಾಣುತ್ತೆ" ಅಂತಂದ ಸೀನಪ್ಪ.

"ಇದಕ್ಕೇನು ಸೀನು! ಯೋಚನೆ ಯಾಕೆ? ಇಬ್ಬರನ್ನೂ ಪುಸಲಾಯಿಸಿ ಅಮ್ಮಾ! ಕುಳ್ಳಸಾತಕ್ಕಾ! ನೀನು ಮನೆಒಳಗಿನ ಇಂಥಿಂಥ ವಿಷಯಗಳ ಜವಾಬ್ದಾರಿ

ತೆಗೆದುಕೋ. ಅಯ್ಯಾ! ದೊಡ್ಡರಂಗಪ್ಪ ಮನೆ ಹೊರಗಿನ ಇಥಿಂಥಾ ವ್ಯಾಪಾರವ ಏರ್ಪಾಡಿನ ಜವಾಬ್ದಾರಿ ನೀನು ಹೊತ್ತುಕೋ ಎಂದು ಇಬ್ಬರಿಗೂ ಸರಿಸಮವಾಗಿ ಇರೋ ಕೆಲಸವನ್ನೆಲ್ಲಾ ಹಂಚಿಬಿಟ್ಟರೆ ಇಬ್ಬರೂ ನಗುನಗುತ ಕೆಲಸಮಾಡ್ತಾರೆ. ಕೆಲಸ ಚೆನ್ನಾಗುತ್ತೆ. ಇದರ ಯೋಚನೆ ನನಗೆ ಬಿಡು, ಚಿಕ್ಕಂದಿನಲ್ಲಿ ಕಪಿಲಾನದೀಲಿ ಈಜುಕ್ಕೆ ಹೋದಾಗ ಸುಳೀಗೆ ಸಿಕ್ಕಿ ನಾನು ಸಾಯೋಹಾಗಿದ್ದಾಗ ನೀನು ನನ್ನ ಹೊರಕ್ಕೆಳೆದು ಪ್ರಾಣ ಉಳಿಸಿದ್ದು ಜ್ಞಾಪಕ ಇದೆಯೇ! ಆ ಉಪಕಾರಕ್ಕೆ ಇಷ್ಟಾದರೂ ಸೇವೆ ನಾನು ಮಾಡದೇ ಇದ್ದರೆ ನಾನೆಂಥ ಮನುಷ್ಯ? ಎಂದ. ಶಾಮಣ್ಣ.

ಸೀನಪ್ಪನಿಗೆ ಸ್ವಲ್ಪ ಧೈರ್ಯ ಬಂತು. ದಿಟವಾಗಲೂ ಶಾಮಣ್ಣ ಚಾಕಚಕ್ಯತೆಯಿಂದ ಕೆಲಸ ನಡೆಸುತ್ತಾನೆ, ಕುಳ್ಳಸಾತಕ್ಕ, ದೊಡ್ಡರಂಗಪ್ಪ ಇಬ್ಬರನ್ನೂ ಬುಟ್ಟೀಗೆ ಹಾಕಿಕೊಂಡು, ತಾನು ಮೇಲ್ವಿಚಾರಣೆ ನೋಡಿಕೊಂಡು ನಿಭಾಯಿಸ್ತಾನೆ ಎಂಬ ನಂಬಿಕೆಯೂ ಬಂತು.

* * *

"ಒಳ್ಳೆ ಅವಲಕ್ಕಿ ನಮ್ಮ ಸೊಸೈಟೀಗೆ ಬಂದಿತ್ತು. ನಿಂಗೆ ಅಂತ ಎರಡು ಸೇರು ತಂದೆ" ಅಂತ ಹೇಳುತ್ತಾ ಶಾಮಣ್ಣ ಕುಳ್ಳಸಾತಕ್ಕನ ಭೇಟಿ ತೆಗೆದುಕೊಂಡ. "ನನಗೇ ಹಲ್ಲೇ ಇಲ್ಲ. ಈ ಅವಲಕ್ಕೀನ ಮೊಸರಲ್ಲಿ ನೆನೆಹಾಕಿ ತಿನ್ನಬೇಕಾದರೆ ಇನ್ನೂ ಮೂರು ದಿನ ನೆನೆಸಬೇಕು" ಅಂತ ಕುಳ್ಳಸಾತಕ್ಕ ಆಗಲೇ ರಾಗ ತೆಗೆದಳು. ಹಾಗಲ್ಲಾ ಸಾತಕ್ಕಾ ಈ ಅವಲಕ್ಕಿ ಆರು ಗಂಟೆ ನೆನೆದರೆ ಬೆಣ್ಣೆಹಾಗೇ ಆಗುತ್ತೆ ಸೊಸೈಟೀಲಿ ಈ ರಖಂ ಅವಲಕ್ಕೀನ ಬೆಣ್ಣೆ ಅವಲಕ್ಕಿ ಅಂತಲೇ ಕರೀತಾರೆ. ಅಷ್ಟು ಹಗುರವಾಗಿದೆ" ಅಂತ ಶಾಮಣ್ಣ ಮುಂದುವರಿಸಿದ 'ನೋಡಮ್ಮಾ! ಸಾತಕ್ಕಾ. ನೀನು ವಯಸ್ಸಾದೋಳು ಸರೋಜಿ ಮದುವೇಗೆ ನಿನ್ನನ್ನ ಏರ್ಪಾಡು ಮಾಡು ಅಂತ ಕೇಳುಕ್ಕೆ ಸೀನು ಯೋಚನೆಮಾಡ್ತಾ ಇದ್ದ. ನಾನಂದೆ, ಪೆಚ್ಚನೀನು ಅನುಭವಸ್ಥೆ ಅವಳು ವಯಸ್ಸಾದಾಕ್ಷಣ ಶಕ್ತಿಯೇನೂ ಕಂದಿಹೋಗಿಲ್ಲ. ಹಾಗಂದ ಮಾತ್ರಕ್ಕೇ ತರಕಾರಿತರುಕ್ಕೆ ಸಾಮಾನು ನೋಡಿತರುಕ್ಕೆ ಅಂತ ಅವಳಿಗೆ ಹೇಳೋದು ತಪ್ಪು. ಶುಕ್ರವಾರ ಲಗ್ನ ಪತ್ರಿಕೆ. ಭಾವೀ ಬೀಗರು ಸಾಯಂಕಾಲ ಬರ್ತಾರೆ. ಅಡಿಗೆ ಊಟ, ಉಪಚಾರ ಎಲ್ಲವನ್ನೂ ನೀನು ಏರ್ಪಾಡು ಮಾಡಬೇಕು. ನಿನಗೆ ಹೊರಗಿನಿಂದ ಏನೇನು ಸಾಮಾನುಬೇಕು ಒಂದು ಪಟ್ಟಿ ಹೇಳು ಬರೆದುಕೊಂಡು ಹೋಗಿ ಶುಕ್ರವಾರ ಸಾಮಾನೆಲ್ಲಾ ನಿನ್ನ ಕೈ ಸೇರೋಹಾಗೆಮಾಡ್ತೀನೆ. ನೀನು ದೊಡ್ಡಮನಸ್ಸು ಮಾಡಿ ಒಪ್ಪಿಕೋಬೇಕು" ಅಂತ ಮೆಲ್ಲಗೆ ಬೆಣ್ಣೆಹಚ್ಚಿದ.

ಕುಳ್ಳಸಾತಕ್ಕ ಬುಟ್ಟಿಗೆ ಬಿದ್ದಳು. "ಹಾಗಾದರೆ ಬರೆಕೋ ಶಾಮು ಅಂತ ಪಟ್ಟಿ ಹೇಳಿದಳು. ಅಡಿಗೆ ಸಾಮಾನೆಲ್ಲಾ ಮನೇಲಿದೆ. ಹೊರಗಿಂದ ತರಬೇಕಾದ್ದು ಬಾಳೆ ಎಲೆ ಎರಡು ಕವಳಿಗೆ, ಬಾಳೆಹಣ್ಣು ಒಂದು ಗೊನೆ, ದೊನ್ನೆ ಕಟ್ಟು ಒಂದು,

ವಿಳ್ಳೆದೆಲೆ ಎರಡು ಕವಳಿಗೆ, ಬಣ್ಣಕಟ್ಟಿದ ಅಡಿಕೆ ಮನೇಲಿದೆ, ಎರಡು ಗಂಧದಬಿಲ್ಲೆ, ರಾಮಮಂದಿರದಿಂದ ಒಂದು ದೊಡ್ಡಜಮುಖಾನ. ಊದು ಕಡ್ಡಿ ಕಟ್ಟು ಒಂದು. ಇಷ್ಟು ನೀನು ತೆಗೆದುಕೊಂಡುಬಾ. ಹಣ್ಣು ತರೋವಾಗ ಚೆನ್ನಾಗಿರೋದು ನೋಡಿ, ಕಳಿತಿರೋದು ಕಂಡು ರಸಬಾಳೆ ಅನ್ನೋದು ಖಾತ್ರಿಮಾಡಿಕೊಂಡು ಬಾ" ಎಂದಳು.

* * *

"ಮಂಡ್ಯದ ಉಂಡೆ ನೆಶ್ಯ, ನಮ್ಮ ಆಫೀಸಿನ ನೌಕರ ಮೊನ್ನೆ ತಂದಿದ್ದ ಬಲು ಚೆನ್ನಾಗಿದೆ. ನಾನೇ ಹುಲುಸಾಗಿ ತೀಡಿದ್ದೇನೆ, ಮಂಡ್ಯದ ಬೆಣ್ಣೆ ಚೆನ್ನಪಟ್ಟಣದ ಸುಣ್ಣ ಹಾಕ್ಕೊಂಡು, ಒಂದು ಚಿಟಿಗೆನೋಡು ರಂಗಪ್ಪಾ" ಅಂತ ಒಂದು ದೊಡ್ಡ ಚಿಟಿಗೇನ ಶಾಮಣ್ಣ ದೊಡ್ಡರಂಗಪ್ಪನಿಗೆ ಲಂಚ ಕೊಟ್ಟ. ದೊಡ್ಡರಂಗಪ್ಪ ಅದನ್ನು ಒಂದು ಮೂಗಿಗೆ ಆಹುತಿಕೊಟ್ಟು ಎಳೆದ ಉಸಿರನ್ನ. ಬಾಯಿ ಹರಡಿತು. ಕಣ್ಣು ಉಕ್ಕಿತು. ಮೈ ಪುಳುಕಿತು. ಕೈ ಕೊಡವಿಕೊಂಡು ದೊಡ್ಡರಂಗಪ್ಪ ಅಂದ "ಶಾಮು ನೆಶ್ಯ ಬಲು ಸೊಗಸಾಗಿದೆ, ಎಲ್ಲಿ ಇನ್ನೊಂದು ಚಿಟಿಕೆ ಕೊಡ್ಮು" ಅಂತ.

ಆ ಚಿಟಿಕೆ ಕೊಡುವಾಗಲೇ ಶಾಮಣ್ಣ ಹೇಳಿದ್ದು. ದೊಡ್ಡ ರಂಗಪ್ಪ ನಮ್ಮ ಸರೋಜಿ ಮದುವೇನ, ಸೀನು ಗೊತ್ತುಮಾಡಿದಾನೆ. ಶುಕ್ರವಾರ ಲಗ್ನಪತ್ರಿಕೆ. ಅವನು ಏನೂ ಅರಿಯದವ. ನೀನು ಬಹಳ ಕೆಲಸ ಕಟ್ಟಿಕೊಂಡಿರೋನು ನಿನಗೆ ವಿರಾಮ ಇಲ್ಲ ಅಂತ ನನ್ನ ಕೇಳಿದ, ನೀನು ಸಹಾಯಮಾಡ್ತೀಯಾ ಅಂತ.

ನಾನಂದೆ " ಮಂಕ ನೀನು. ದೊಡ್ಡ ರಂಗಪ್ಪನಂತಹ ಅನುಭವಶಾಲಿ ಇರೋವಾಗ ಅವನನ್ನು ಬಿಟ್ಟವರುಂಟೆ. ಆದರೆ ಎಲ್ಲಾ ಕೆಲಸಾನೂ ಅವನಿಗೇ ಅಂಟಿಸಬಾರದು. ಆದರೆ ಮುಖ್ಯವಾದ ಅಂಗಡೀಲಿ ತರಬೇಕಾದ ಸಾಮಾನಿಗೆ ಅವನನ್ನೇ ಕೋರಿಕೋ ಬೇಕು ಅಂದೆ. ಅವನು ನನಗೆ ಕೇಳುಕ್ಕೆ ಬಾಯಿಬರುಲ್ಲ ನೀನೇ ಕೇಳು ಅಂದ. ಅದಕ್ಕೇ ನಿನ್ನನ್ನ ಕೇಳಿಕೋತಾ ಇದೀನಿ." ಎಂದು.

" ಅದೇನು ಸಾಮಾನು ಹೇಳು, ಐದು ನಿಮಿಷದಲ್ಲಿ ಪರಮಾಯಿಷಿ ಅದದ್ದನ್ನೇ ಸುಲಭ ಖರ್ಚಿನಲ್ಲಿ ತಂದುಹಾಕುತ್ತೇನೆ" ಎಂದು ದೊಡ್ಡರಂಗಪ್ಪ ನೆಶ್ಯದ ಅಮಲಿನಲ್ಲಿ.

ಸಾಮಾನಿನ ಪಟ್ಟೆಯನ್ನು ಶಾಮಣ್ಣ ಅವನ ಕೈಲಿ ಕೊಟ್ಟ. " ಇವತ್ತೇ ತಂದುಬಿಡಬೇಡ ದೊಡ್ಡರಂಗಪ್ಪಾ, ಶುಕ್ರವಾರ ಲಗ್ನಪತ್ರಿಕೆ. ಅವತ್ತಿಗೆ ಬಂದರೆ ಸಾಕು" ಎಂದು ಹುಷಾರು ಕೂಡ ಕೊಟ್ಟ.

* * *

ಸಬ್ ಓವರ್ಸಿ ಸೀನಪ್ಪಾ ಬೆಳಗಿನ ನಾಲಾ ಇನ್ಸ್‌ಪೆಕ್ಷನ್ ಮುಗಿಸಿಕೊಂಡು, ತಂದ ಎರಡು ಸೌತೇಕಾಯಿ, ಒಂದು ಚೀಲ ಹುರುಳಿಕಾಯನ್ನ ಅಮಾಲ್ದಾರರ ಮನೆಗೆ ಕೊಟ್ಟು ಬೈಸಿಕಲ್ಲನ್ನು ತಳ್ಳಿಕೊಂಡು ಸುಸ್ತಾಗಿ ಮನೆಗೆ ಹಿಂತಿರುಗುತ್ತಾ

ಇದ್ದಾಗ, ಪೋಲೀಸ್ ಠಾಣೆ ಹತ್ತಿರ ಯಾರೋ ಅವನ ಬೆನ್ನಮೇಲೆ ಒಂದು ಗುದ್ದು ಹಾಕಿದರು. "ಯಾವನೋ ಅ........" ಅಂತ ಸೀನಪ್ಪ ರೇಗಿ ಹಿಂತಿರುಗಿದರೆ ಶಾಮಣ್ಣ ಹಿಂದೆ. "ಎಲ್ಲಾ ವ್ಯವಸ್ಥೇನೂ ಚೆನ್ನಾಗಿ ಮಾಡಿಬಿಟ್ಟಿದ್ದೇನೆ. ಕುಳ್ಳ ಸಾತಕ್ಕ ಖುಷಿಯಾಗಿ ಒಪ್ಪಿಕೊಂಡಳು. ದೊಡ್ಡರಂಗಪ್ಪ ಆಗಲಿ ಅಂದ. ನೀನೂ ನಾನೂ ಆ ರಾತ್ರಿ ಚೊಕ್ಕ ಭೋಜನ ಮಾಡಿ, ಬಂದ ಬೀಗರ ಕೈಲಿ ಎಷ್ಟು ಲಕ್ಷಣ ವಾಗಿ, ಎಷ್ಟು ವಿಹಿತವಾಗಿ ಏರ್ಪಾಡು ಮಾಡಿಸಿದ್ದೀರಿ. ಇದಕ್ಕೆ ಎಷ್ಟು ಕಷ್ಟಪಟ್ಟಿರ ಬೇಕು, ಎಂದು ಶಹಭಾಶ್ ಪಡೆಯೋದೊಂದೇ ಬಾಕಿ" ಎಂದ.

ಬೆನ್ನಿಗೆ ಬಿದ್ದ ಗುದ್ದು ಮರೆತು ಸೀನಪ್ಪ "ತುಂಬಾ ಥ್ಯಾಂಕ್ಸ್ ಶಾಮು. ನಿನ್ನ ಮೊಮ್ಮಗಳ ಮದುವೇಲಿ ನಾನೂ ಇದೇರೀತಿ ಅನುಭವಪಡೆದು ಈ ಋಣ ಪರಿಹಾರ ಮಾಡಿಕೊಳ್ಳುತ್ತೇನೆ" ಎಂದ.

ಶುಕ್ರವಾರ ಸಾಯಂಕಾಲ ಐದು ಗಂಟೆಯ ಹೊತ್ತು. ಸೀನಪ್ಪ ವರಾಂಡಾದಲ್ಲಿ ಠಳಾಯಿಸುತ್ತಿದ್ದಾನೆ. ಶಾಮಣ್ಣ ಬಂದ. ಬೈಸಿಕಲ್ ಹೊರಗಿಟ್ಟು ಎಲ್ಲಾ ಸರಿ ಯಾಗಿದೆ ತಾನೆ ಎಂದು ಸೀನಪ್ಪನಿಗೆ ಹೇಳಿ ಮನೆ ಒಳಕ್ಕೆಹೋದ. ಎರಡೇ ನಿಮಿಷ ದಲ್ಲಿ ಹೊರಕ್ಕೆ ಬಂದ. ಸೀನಪ್ಪನ ಹತ್ತಿರ ಮಾತೂ ಆಡದೆ ಬೈಸಿಕಲ್ ಹತ್ತಿಕೊಂಡು ಹೊರಟೇಹೋದ.

'ಸೀನಪ್ಪನಿಗೆ ಗಾಭರಿ. 'ಯಾಕೆ ಹೀಗೆ ಹೊರಟುಹೋದ.' ಅಂತ.

ಸೀನಪ್ಪನ ಹೆಂಡತಿ ಮನೆ ಒಳಗಿಂದ ಬಂದಳು. ಗಂಡನ ಮುಖ ನೋಡಿದಳು. "ಯಾಕೆ, ಈ ಹೊತ್ತಿನಲ್ಲಿ ಇವತ್ತು ಈಗ ಹೀಗೆ ಸಪ್ಪಗಿದೀರಿ. ಬೀಗರು ಬರೋ ಹೊತ್ತಾಯಿತು ನಗುಮುಖ ಬೇಡವೇ?" ಎಂದಳು.


'ಅಲ್ಲಾ! ಶಾಮಣ್ಣ ಬಂದೋನು, ಹಾಗೆ ಹೊರಟುಹೋದ ಯಾಕೆ ಹಾಗೆ ಮಾಡಿದ ಅಂತ ಗಾಭರಿ" ಅಂದಳು.

"ಯಾಕೆ ಗೊತ್ತೆ? ದೊಡ್ಡರಂಗಪ್ಪನಿಗೆ ಬಾಳೆಲೆ ಬಾಳೆಹಣ್ಣು ಇತ್ಯಾದಿ ಇತ್ಯಾದಿ ಎಲ್ಲಾ ತೆಗೆದುಕೊಂಡು ಬಾ ಅಂತ ಅವನಿಗೆ ಒಪ್ಪಿಸಿದ್ದ ಶಾಮಣ್ಣ. ಇವತ್ತು ಬೆಳಿಗ್ಗೆ ದೊಡ್ಡರಂಗಪ್ಪನ ಮನೇಗೆ ಕರೆಯಕ್ಕೆ ಹೋಗಿದ್ದೆ. ದೊಡ್ಡರಂಗಪ್ಪ ನಂಜನಗೂಡಿಗೆ ಕೇಸಿಗೆ ಹೋಗಿದ್ದ. ಅವನ ಹೆಂಡತಿ ಹೇಳಿದಳು "ಏನಮ್ಮಾ! ಇವತ್ತು ಲಗ್ನ ಪತ್ರಿಕೆ ಅಂತೀ. ಇವರು ಹೇಳಿದರು ಮುಂದಿನ ಶುಕ್ರವಾರ ನಾನೇ ಸಾಮಾನು ತರುತ್ತೇನೆ ಅಂತ. ನೀನು ಬಂದು ಇವತ್ತು ಕರೀತಾ ಇದ್ದಿ" ಅಂದಳು. "ಇವತ್ತೇ ಕಾಣೆ" ಲಗ್ನಪತ್ರಿಕೆ ಅಂತ ನಾನು ಖಡಾಖಡಿಗಿಹೇಳಿ ಬಂದೆ. ಶಾಮಣ್ಣ ಒಳಕ್ಕೆ ಬಂದು ದೊಡ್ಡರಂಗಪ್ಪ ಬಂದಿದ್ದನಾ ಅಂತ ಕೇಳಿದ. ಇಲ್ಲಾ ಅಂದೆ. ಆದರೆ ನಾನು

ಎಲ್ಲಾ ಸಾಮಾನೂ ತರಿಸಿದೀನಿ ಅಂತ ಹೇಳೋದಕ್ಕೆ ಮುಂಚೇನೆ ಧರಪರ ಓಡಿ ಹೋದ, "ಚಿಕ್ಕನ ಕೈಲಿ ಹೇಳಿ ಕಳಿಸೋಣ ಇರಿ ಬರ್ತಾನೆ ಊಟದಹೊತ್ತಿಗೆ" ಅಂದಳು ಆಕೆ.

* * *

"ಏನು ಶಾಮಣ್ಣನೋರೆ, ರಾಶಿ ರಾಶಿ ಮಾತಾಡೋರು ಇವತ್ತು ಮೌನ, ಬೀಗರು ಅಂತ ಇಷ್ಟು ಬಿಗುಮಾನ ಬೇಡ" ಅಂತ ಬೀಗರು ಅಂದಿದ್ದೇ ಅವನಿಗೆ ಬಂದ ಶಹಭಾಸ್‌ಗಿರಿ.



"ಈ ಕಸುಬು ಶುರು ಮಾಡಿದಾಗಿನಿಂದ, ನೋಡಪ್ಪಾ—ಒಮ್ಮೆಯಾದರೂ ನಾನು ಬಟ್ಟೆ ಹೊಲೆಸಿಲ್ಲ!"

ಸುಗ್ರೀವನಿಗೆ ಆಜ್ಞೆ

ಇವತ್ತು ಸಾಯಂಕಾಲ ನಮ್ಮ ಮನೆಗೆ ಮಂತ್ರಿಗಳ ಸೋದರಮಾವನ ಅಳಿಯ ಬರುತ್ತಾನಂತೆ, ಹೆಂಡತಿಯೊಡಗೂಡಿ.

ಆದ್ದರಿಂದ, ಆಫೀಸಿಗೆ ರಜ ತೆಗೆದುಕೊಂಡು, ನಾನು ಬೇಗನೆ ಹೋಗಬೇಕಂತೆ. ಹೋಗುತ್ತ ದಾರಿಯಲ್ಲಿ, ಅಂಗಡಿಯಿಂದ ಊದುಬತ್ತಿ, ವೀಳೆದೆಲೆ, ಸುಣ್ಣ, ಪಂಚೇರು ಬಾದಾಮಿ, ಎರಡಾಣೆಗೆ ಹೂವು, ಅವಳಿಗೆ ನಾಲ್ಕು ಹೇರ್ಪಿನ್ನು, ಮಗುವಿಗೊಂದು ಗಜ ಟೇಪು, ನನ್ನ ಷರ್ಟಿಗೆ ಎರಡು ಗುಂಡಿ—ಇಷ್ಟನ್ನೂ ಮರೆಯದೆ ತೆಗೆದುಕೊಂಡು ಹೋಗಬೇಕಂತೆ. ಮರೆಯಕೂಡದಂತೆ. ದಿನವೂ ನಾವು ಪೇಪರ್ ತರಿಸುತ್ತೇವೆ ಎಂದು ಅವನಿಗೆ ತೋರಿಸುವುದಕ್ಕಾಗಿ, 'ಹಿಂಡು' ಅಲ್ಲದೆ ಯಾವುದಾದರೂ ಎರಡು ಕನ್ನಡ ಪೇಪರು, ಇವು ಬೇರೆ ಬೇಕಂತೆ, ಇವತ್ತಿನ ತಾರೀಖಿನದು. ಜಾಣೆ, ನರಸಮ್ಮ! ಅವಳ ಬುದ್ಧಿ ಎಷ್ಟುದೂರ ಓಡುತ್ತದೆ, ನೋಡಿ.

ಪಕ್ಕದ ಮನೆ ಜವಾನನ ಕಾಲು ಕಟ್ಟಿ, ಅವನನ್ನು ಬರಮಾಡಿಕೊಂಡು, ನಮ್ಮ ಮನೆಯಲ್ಲಿರುವ ಮುರುಕಲು ಮೇಜು ಕುರ್ಚಿ ಮಂಚಗಳನ್ನೆಲ್ಲ ಹಿತ್ತಲಲ್ಲಿ ಬಿಸಾಕಿ, ಶೆಟ್ಟರ ಅಂಗಡಿ ಟಾರ್ಪಾಲಿನ್ ತರಿಸಿ, ಅವಕ್ಕೆ ಹೊದಿಸಿ ಮುಚ್ಚಬೇಕಂತೆ. ನನ್ನ ಆಫೀಸು ೫ ಗಂಟೆಗೆ ಮುಚ್ಚುತ್ತಾರೆ. ತಕ್ಷಣವೇ ನಾನು ಜೋಡೆತ್ತಿನಗಾಡಿ ಬಾಡಿಗೆ ತೆಗೆದು, ಅಲ್ಲಿಗೆ ಹೋಗಿ, ಇದ್ದದ್ದರಲ್ಲಿ, ಒಳ್ಳೆಯದಾಗಿ ಮೂರು ಮೇಜು ಆರು ಕುರ್ಚಿ ಅಲ್ಲಿಂದ ಸಾಗಿಸಿ, ಹಿಂಭಾಗದ ಬಾಗಿಲಮೂಲಕ ಮನೆಯೊಳಕ್ಕೆ ತಂದು, ಜೋಡಿಸಿ, ಒರಸಿ ಸಿದ್ಧ ಪಡಿಸಬೇಕಂತೆ. ದಾರಿಯಲ್ಲಿ ನಮ್ಮ ಆಫೀಸ್, ಮ್ಯಾನೇಜರ ಮನೆಯಿಂದ (ಯಾರು ಒರುತ್ತಿದಾರೆ ನಮ್ಮ ಮನೆಗೆ ಎಂಬ ಸುಳುವುಕೊಡದೆ) ಬೆಳ್ಳಿ ಬಟ್ಟಲು ಬೆಳ್ಳಿ ತಟ್ಟೆ ಬೆಳ್ಳಿ ಕುಂಕುಮದ ಭರಣಿ ಸಾಲ ತರಬೇಕು.

ಈ ಮಧ್ಯೆ, ನಮ್ಮ ಮನೆ ಹುಡುಗರು ಆ ಕೋಣೆಯ ಗೋಡೆಯ ಮೇಲೆ ಗೀಚಿರುವ ಮಗ್ಗಿನಾಲನ್ನೂ, ಮೇಷ್ಟರಮೇಲಿನ ಪದ್ಯಗಳನ್ನೂ, ನೀರು ಹಾಕಿ ಉಜ್ಜಿ ತೆಗೆದು, ಕಿಟಕಿಗಾಜನ್ನೆಲ್ಲ ತೊಳೆದು, ನನ್ನ ಪಂಚೆ ಉತ್ತರೀಯಗಳನ್ನು ಒಗೆದು ಒಣಗಿಸಿ ಮಡಿಮಾಡಿ ಉಟ್ಟುಕೊಂಡು ಸಿದ್ಧವಾಗಬೇಕು. ನರಸಮ್ಮನ ಆಜ್ಞೆಯೆಂದರೆ, ಸುಗ್ರೀವನೂ ಕೂಡ ನಡುಗುತ್ತಾನೆ.

—ರೇವಣ್ಣ



VITOFERRIN

TRADE MARK

MYSORE INDUSTRIAL & TESTING LABORATORY LTD. MALLESWARAM BANGALORE

ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)


ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ – – – ಬೆಂಗಳೂರು 3.


ಬರುತ್ತಿದೆ!
ನ್ಯಾಷನಲ್ ಪ್ರೊಡಕ್ಷನ್ಸ್
ಮಾಪಿಳ್ಳೈ
ತಮಿಳು
ಟಿ.ಆರ್.ರಾಮಚಂದ್ರನ್.. ಪಿ.ಕೆ.ಸರಸ್ವತಿ
ನರಸಿಂಹಭಾರತಿ.. ಸರೋಜ.. ಡಿ.ಬಾಲಸುಬ್ರಹ್ಮಣ್ಯಂ
ಸ್ಟುಡಿಯೋ ನ್ಯೂಟೋನ್
a YASODHARA Release..



ಬೆಳ್ಳಗೆ
ಒಗೆಯಲ್ಪಟ್ಟಿವೆ
ಪ್ರಕಾಶಮಾನವಾಗಿ
ಒಗೆಯಲ್ಪಟ್ಟಿವೆ
ಇದಕ್ಕೆ
ಸನ್‌ಲೈಟ್
ಸೋಪೇ ಕಾರಣ
SUNLIGHT SOAP


"ಪ್ರತಿದಿನದ ಶಕ್ತಿಗೆ
ಅವನ ಆಹಾರವು ಯಾವಾಗಲೂ
ಡಾಲ್ಡದಲ್ಲೇ
ತಯಾರಿಸಲ್ಪಡುತ್ತದೆ"
ಡಾಲ್ಡ,
ಸಮತೂಕಾಹಾರದಲ್ಲಿ ನಿಮಗೆ
ಬೇಕಾದ ಶಕ್ತಿಯನ್ನು ಕೊಡುವ
ಕೊಬ್ಬನ್ನು ಒದಗಿಸುತ್ತದೆ
DALDA
HYDROGENATED GROUNDNUT AND TIL OIL

HVM 167-50 KN


In your Make-up Locks Count a lot...
RAJA
AMLA
HAIR OIL
"HELPS YOU TO KEEP LOCKS OF LOVELY AND LUSTROUS HAIR"
MANYAM & CO., BANGALORE · MADRAS · MADURA · BOMBAY